Karnataka Mental Counsellors Forum (R)

ಖಾಸಗಿ ಪ್ರಸಾರಕ್ಕಾಗಿ

# ಸಮಾಲೋಚನೆ

Samalochane

## ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆ (ರಿ.)

ಸಂಪುಟ – 4 ಸಂಚಿಕೆ – 2 ಜೂನ್ – ಡಿಸೆಂಬರ್, 2025

**ಸಮಾಧಾನ ಆಪ್ತ ಸಲಹಾ ಕೇಂದ್ರ**

324, 6ನೇ ಕ್ರಾಸ್, ಅರಕೆರೆ ಮೈಕೋ ಲೇಔಟ್ ಮೊದಲನೆಯ ಹಂತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076



ಎಲ್ಲರಿಗೂ
ಕನ್ನಡ ರಾಜ್ಯೋತ್ಸವದ
ಶುಭಾಶಯಗಳು










ಸೀಆರ್‌ಸಿಯವರಿಗೆ
"ಜೀವಮಾನ ಸಾಧನೆ"
ಪ್ರಶಸ್ತಿ ಪ್ರದಾನ



ಖಿನ್ನತೆ ಲಕ್ಷಣಗಳು,
ಪರಿಹಾರೋಪಾಯಗಳು






ಕ್ಯಾನ್ಸರ್ ಬಗ್ಗೆ
ಅನಗತ್ಯ ಭಯ ಬೇಡ

# ಅಧ್ಯಕ್ಷರ ನುಡಿ



2025ನೇ ಇಸವಿಯ "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ" ಮತ್ತು "ಕನ್ನಡ ರಾಜ್ಯೋತ್ಸವ"ವನ್ನು ಇಂದು ನಾವೆಲ್ಲ ಆಚರಿಸುತ್ತಿದ್ದೇವೆ. ಈ ವರ್ಷದ ಘೋಷಣೆ "ಆಪತ್ತುಗಳು ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಮಾನಸಿಕ ಆರೋಗ್ಯ ಸೇವೆಗಳ ಲಭ್ಯತೆ" ಎಂದಾಗಿದೆ. ಯುದ್ಧ, ನೆರೆ, ಭೂಕಂಪ ಮುಂತಾದ ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ ಜನರ ಮನಸ್ಸು ಕೆಡುವುದು ಸಹಜ. ಅಂಥ ಸಮಯದಲ್ಲಿ ಜನರಿಗೆ ಧೈರ್ಯ ನೀಡುವ ಮಾತು, ಸಹಾಯ ಹಾಗೂ ಮಾನಸಿಕ ಸೇವೆಗಳು ದೊರೆಯಬೇಕು. ಈ ರೀತಿಯ ಧೈರ್ಯ, ಸಾಂತ್ವನಗಳೇ ಆಪ್ತ ಸಮಾಲೋಚನೆ ಅಥವಾ ಕೌನ್ಸೆಲಿಂಗ್.

ಇತ್ತೀಚಿನ ದಿನಗಳಲ್ಲಿ ಕೌನ್ಸೆಲಿಂಗ್ ಅದೆಷ್ಟು ಅಗತ್ಯವಾಗಿಬಿಟ್ಟಿದೆ ಎಂದರೆ ಹಲವಾರು ಕ್ಷೇತ್ರಗಳಲ್ಲಿ ಕೌನ್ಸೆಲಿಂಗ್ ಅಗತ್ಯವಾಗಿದೆ. ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೆ, ಸಣ್ಣ ಮಕ್ಕಳಿಗೆ, ಹದಿಹರೆಯದವರಿಗೆ, ನಡುವಯಸ್ಸಿನವರಿಗೆ, ಮಹಿಳೆಯರಿಗೆ, ವೃದ್ಧರಿಗೆ; ವಿವಾಹಪೂರ್ವ ಮತ್ತು ವಿವಾಹಾನಂತರ; ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ, ವಾಹನ ಚಾಲಕರಿಗೆ, ಪೊಲೀಸರಿಗೆ – ಹೀಗೆ ಎಲ್ಲ ಕ್ಷೇತ್ರಗಳಿಗೂ ಅತ್ಯಗತ್ಯವಾಗಿದೆ.

ಈ ಸೇವೆಯನ್ನು ಒದಗಿಸುವ ದಿಸೆಯಲ್ಲಿ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಜೊತೆಜೊತೆಗೇ ಕೌನ್ಸೆಲಿಂಗ್‌ಗೆ ಸಂಬಂಧಿಸಿದಂತೆ ತಜ್ಞರಿಂದ ಉಪನ್ಯಾಸಗಳು, ಸಲಹೆಗಳನ್ನು ದೊರಕಿಸುತ್ತಿದ್ದೇವೆ. ಈ ರೀತಿಯ ಆರೋಗ್ಯ ದಿನಾಚರಣೆ, ರಾಜ್ಯೋತ್ಸವಾಚರಣೆ, ಆತ್ಮಹತ್ಯಾ ತಡೆಗಟ್ಟುವಿಕೆ ದಿನಾಚರಣೆಗಳ ಸಂದರ್ಭದಲ್ಲೂ ಆರೋಗ್ಯ ರಕ್ಷಣೆಯ ಮಹತ್ವವನ್ನು ಸಾರುತ್ತಿದ್ದೇವೆ.

ಈ ದಿಸೆಯಲ್ಲಿ ಆಪ್ತಸಮಾಲೋಚಕರಾಗ ಬಯಸುವವರಿಗೆ ತರಬೇತಿ ಅಗತ್ಯ. ಈ ತರಬೇತಿಯನ್ನು ಸಮಾಧಾನ ಕೇಂದ್ರದಲ್ಲಿ ಒದಗಿಸಲಾಗುತ್ತಿದೆ. ಅದರ ವಿವರಗಳನ್ನು ಪುಟ 3ರಲ್ಲಿ ಕೊಡಲಾಗಿದೆ. ನಿಮ್ಹಾನ್ಸ್ ಸಂಸ್ಥೆ ಪ್ರತಿ ಬ್ಯಾಚಿನಲ್ಲಿ ಕನಿಷ್ಠ 100 ಜನರಿಗೆ "ಆನ್‌ಲೈನ್ ಲೇ ಕೌನ್ಸೆಲರ್ಸ್ ತರಬೇತಿ" ಕೊಡುತ್ತಿರುವುದು ಗಮನಾರ್ಹವಾಗಿದೆ. ಇದೇ ಅಕ್ಟೋಬರ್, 2025ರಿಂದ ಡಿಸೆಂಬರ್ 2025ರವರೆಗೆ 3 ತಿಂಗಳ ತರಬೇತಿ ಆರಂಭವಾಗಿದೆ. ಈ ತರಬೇತಿಯಲ್ಲಿ ನಿಮ್ಹಾನ್ಸ್ ಡಿಜಿಟಲ್ ಅಕಾಡೆಮಿಯು ಆಸಕ್ತರಿಗೆ, ಸರಳ ಭಾಷೆಯಲ್ಲಿ ಮಿದುಳು, ಅದರ ಅಂಗರಚನೆ, ನರರಸಾಯನ ಶಾಸ್ತ್ರ, ನ್ಯೂರಾನ್‌ಗಳು, ಕೌನ್ಸೆಲಿಂಗ್‌ನ ಮೂಲಭೂತ ತತ್ವಗಳು, ಅದರ ಕೌಶಲ್ಯಗಳು, ಮನೋವೈಜ್ಞಾನಿಕ ಪ್ರಥಮ ಚಿಕಿತ್ಸೆ, ಕೌನ್ಸೆಲಿಂಗ್ ಮಾಡುವ ಸಂದರ್ಭದಲ್ಲಿ ಎದುರಿಸಬೇಕಾದ ಸವಾಲುಗಳು, ಕೌನ್ಸೆಲಿಂಗ್‌ನ ನೈತಿಕ ಜವಾಬ್ದಾರಿ, ಒತ್ತಡ ನಿರ್ವಹಣೆ, ಸಾವು ಮತ್ತು ದುಃಖ, ಕುಟುಂಬದಲ್ಲಿ ಘರ್ಷಣೆ, ಹಿರಿಯರಿಗೆ ಸಂಬಂಧಿಸಿದ ವರ್ತನೆಗಳು, ಮಕ್ಕಳು ಮತ್ತು ಹದಿಹರೆಯದವರಿಗೆ ಸಂಬಂಧಿಸಿದ ವರ್ತನೆ ಸಮಸ್ಯೆಗಳು, ಮಾನಸಿಕ ಅಸ್ತವ್ಯಸ್ತತೆಗಳು, ಯೋಗ ಮತ್ತು ಮಾನಸಿಕ ಆರೋಗ್ಯ – ಈ ಎಲ್ಲ ವಿಷಯಗಳ ಬಗ್ಗೆ ತಜ್ಞ ಮನೋವೈದ್ಯರು, ಮನೋ ವಿಜ್ಞಾನಿಗಳು, ಆಪ್ತಸಮಾಲೋಚಕರು ತರಬೇತಿ ನೀಡುತ್ತಿದ್ದಾರೆ.

ದೇಶಾದ್ಯಂತ ಆಸಕ್ತರು ಈ ತರಬೇತಿಯಲ್ಲಿ ಅತಿ ಉತ್ಸಾಹದಿಂದ ಭಾಗವಹಿಸುತ್ತಿರುವ ಬಗ್ಗೆ ತರಬೇತಿ ಪಡೆಯುತ್ತಿರುವವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 2026ನೇ ಇಸವಿಯಲ್ಲಿ ಪುನಃ ಪ್ರಾರಂಭವಾಗುವ ಈ ತರಬೇತಿಯ 21ನೇ ಬ್ಯಾಚ್‌ಗಾಗಿ ಆಸಕ್ತರು ಎದುರು ನೋಡಬೇಕಾಗಿದೆ. ಇದಕ್ಕಾಗಿ ಆಸಕ್ತರು nimhans.nd ವೈಬ್‌ಸೈಟ್‌ಗೆ ಹೋಗಿ ಹೆಚ್ಚಿನ ವಿವರಗಳನ್ನು ಪಡೆಯಬಹುದು.

ನಮ್ಮ ವೇದಿಕೆ ಸಹಾ ಮುಂದಿನ ದಿನಗಳಲ್ಲಿ ಕೌನ್ಸೆಲಿಂಗ್‌ನ ವಿವಿಧ ಆಯಾಮಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಕ್ರಮಗಳ ತಯಾರಿಕೆ ಯೋಜನೆ ಮಾಡುತ್ತಿದೆ. ಆಸಕ್ತರು ತಮ್ಮ ಅಭಿಪ್ರಾಯ, ಸಲಹೆಗಳನ್ನು ನಮಗೆ ತಿಳಿಸಲು ಕೋರುತ್ತೇನೆ.

2024ರಲ್ಲಿ ವೇದಿಕೆ ನಿರ್ಧರಿಸಿದಂತೆ ವೇದಿಕೆಯ ಮೂಲಕ ಆರೋಗ್ಯ ಮಾಹಿತಿ ಪುಸ್ತಕ ಪ್ರಕಟನೆಯನ್ನು ಪ್ರಾರಂಭಿಸಿದ್ದೇವೆ. ಪದ್ಮಶ್ರೀ ಡಾ. ಸಿ.ಆರ್. ಚಂದ್ರಶೇಖರ್ ಅವರ "ಚಿಂತೆ ಬಿಡು ಮನವೇ" ಪುಸ್ತಕವನ್ನು ಪ್ರಕಟಿಸಿದ್ದೇವೆ. ಮುಂದೆ ಆ ಪುಸ್ತಕದ ಇಂಗ್ಲಿಷ್ ಅವತರಣಿಕೆಯೂ ಪ್ರಕಟಗೊಂಡಿದೆ.

ಈ ಸಂಚಿಕೆಯಲ್ಲಿ ವಿಶೇಷವಾಗಿ ಅನೇಕ ಮಾನಸಿಕ ಆರೋಗ್ಯ ಪುಸ್ತಕಗಳ ಕಿರು ಪರಿಚಯವನ್ನು ಮಾಡಿಕೊಡಲಾಗಿದೆ. ಈ ಪುಸ್ತಕಗಳು ಸಮಾಧಾನ ಆಪ್ತಸಮಾಲೋಚನ ಕೇಂದ್ರದಲ್ಲಿ ದೊರೆಯುತ್ತವೆ.

ಮಕ್ಕಳಿಗೆ ಆಪ್ತಸಮಾಲೋಚನೆ ಮತ್ತು ಅದಕ್ಕಾಗಿ ಶಾಲೆಗಳಲ್ಲಿ ಮಾನಸಿಕ ತಜ್ಞರ ಅವಶ್ಯಕತೆಯ ಚರ್ಚೆ ನಡೆದಿದೆ. ಈ ಬಗ್ಗೆ ಸುಪ್ರೀಂಕೋರ್ಟ್ ಸೂಕ್ತ ನಿರ್ದೇಶನಗಳನ್ನು ನೀಡಿದೆ. ಇದರಲ್ಲಿ ಶಾಲೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಪ್ರಮಾಣೀಕೃತ ಮಾನಸಿಕ ಆರೋಗ್ಯ ವೃತ್ತಿಪರರಿಂದ ಕಡ್ಡಾಯವಾಗಿ ತರಬೇತಿ ಪಡೆಯಬೇಕು ಎಂದು ಸಲಹೆ ಮಾಡಿದೆ. ಈ ದಿಸೆಯಲ್ಲಿ ತರಬೇತಿ ನೀಡುತ್ತಿರುವ ಸಂಸ್ಥೆಗಳ ಜವಾಬ್ದಾರಿ ಹೆಚ್ಚಾಗಲಿದೆ.

ಕನ್ನಡ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ನಾಡಿನ ಸಮಸ್ತ ಕನ್ನಡಿಗರಿಗೆ ಶುಭಾಶಯಗಳನ್ನು ಕೋರುತ್ತೇನೆ.

ಡಾ. ಸುವರ್ಣ ಅಮರನಾಥ್
ಅಧ್ಯಕ್ಷರು

**ಸಮಾಲೋಚನೆ - ತ್ರೈಮಾಸಿಕ ಪತ್ರಿಕೆ**
**Samalochane** - Quarterly Magazine
**ಸಂಪುಟ – 1 ಸಂಚಿಕೆ – 3 ನವೆಂಬರ್ – 2025**

**ಡಾ. ಸಿ.ಆರ್. ಚಂದ್ರಶೇಖರ್**
ಗೌರವಾನ್ವಿತ ಮುಖ್ಯ ಮಾರ್ಗದರ್ಶಿ
ಮೊ : 9845605615
**ಡಾ. ಸುವರ್ಣ ಅಮರನಾಥ್**
ಅಧ್ಯಕ್ಷರು
ಮೊ : 948800704
**ಡಾ. ಎನ್. ಗೋಪಾಲಕೃಷ್ಣ**
ಉಪಾಧ್ಯಕ್ಷರು ಹಾಗೂ ಸಂಪಾದಕರು
ಮೊ : 9686588485
**ಡಾ. ಬಿ.ಎಂ. ಬಸವರಾಜ**
ಪ್ರಧಾನ ಕಾರ್ಯದರ್ಶಿ
ಮೊ : 7411670240
**ಶ್ರೀಮತಿ ಲಕ್ಷ್ಮೀರಾವ್**
ಜಂಟಿ ಕಾರ್ಯದರ್ಶಿ
ಮೊ : 9901054995
**ಶ್ರೀಮತಿ ಬಿ.ಜಿ. ಗಾಯತ್ರಿ**
ಖಜಾಂಚಿ
ಮೊ : 9880484688

**ಕಾರ್ಯಕಾರಿ ಸಮಿತಿ ಸದಸ್ಯರು**
ಶ್ರೀಮತಿ ರಾಜೇಶ್ವರಿ
ಶ್ರೀಮತಿ ಅನುಪಮಾ ರಮೇಶ್
ಶ್ರೀಮತಿ ಸರಸ್ವತಿ ಶಿಕಾರಿಪುರ
ಶ್ರೀಮತಿ ಚಂದ್ರಕಾಂತ
ಶ್ರೀ ಪ್ರದೀಪ್ ವೈ.ಎನ್.

**ಸಮಾಲೋಚನೆ ಕಾರ್ಯಾಲಯ** :
ಸಮಾಧಾನ ಕೌನ್ಸಿಲಿಂಗ್ ಸೆಂಟರ್
#324, 6ನೇ ಕ್ರಾಸ್, ಅರಕೆರೆ
ಮೈಕೋ ಲೇಔಟ್, 1ನೇ ಹಂತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076
ಫೋನ್ : 080–26482929

**ಲೇಖನಗಳು ಮತ್ತು ಅಭಿಪ್ರಾಯಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಬಹುದು.**
**ಮೊ : 9686588485**

**E-Mail : tushara074@gmail.com**

Life Membership is Rs. 1000/-
Payment to be made to the following account:
Account No. **79200100006956**
Name: **KARNATAKA HAVYASI APTHA SAMAALOCHAKARA VEDIKE ®**
IFSC Code : **BARB0VJBILE**
(Zero after BARB), Bank of Baroda, Bilekahalli Branch.

## ಸಮಾಧಾನ ಆಪ್ತ ಸಲಹಾ ಕೇಂದ್ರ

# 324, 6ನೇ ಕ್ರಾಸ್, 1ನೇ ಘಟ್ಟ, ಅರಕೆರೆ ಮೈಕೊ ಲೇಔಟ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076

### ಉಚಿತ ಸಲಹೆ-ಚಿಕಿತ್ಸೆ, ಸಮಾಲೋಚನಾ-ಸೇವೆಗಳು

ಪ್ರತಿದಿನ ಬೆಳಿಗ್ಗೆ 11 ರಿಂದ 1 ಗಂಟೆ, ಸಂಜೆ 6 ರಿಂದ 8 ಗಂಟೆ, ಮೊದಲೆ ಅಪಾಯಿಂಟ್ಮೆಂಟ್ ಇಲ್ಲ. ಮೊದಲು ಬಂದವರಿಗೆ ಮೊದಲ ಆದ್ಯತೆ, ಕೌಂಟರಿನಲ್ಲಿ ಹೆಸರು ನೋಂದಾಯಿಸಿ.

**ಈ ಕೆಳಗಿನ ಸಮಸ್ಯೆಗಳಿಗೆ ಸಲಹೆ ದೊರೆಯುತ್ತದೆ**

- ✓ ಮಕ್ಕಳಲ್ಲಿ ಓದುವ–ಕಲಿಯುವ ತೊಂದರೆಗಳು
- ✓ ನಡವಳಿಕೆ ಸಮಸ್ಯೆಗಳು
- ✓ ಭಾವೋದ್ವೇಗಗಳು– ಆತಂಕ/ಖಿನ್ನತೆ/ಕೋಪ
- ✓ ಅಲ್ಪ ಮತ್ತು ತೀವ್ರ ಮಟ್ಟದ ಮಾನಸಿಕ ಖಾಯಿಲೆಗಳು
- ✓ ಧೂಮಪಾನ, ಮದ್ಯಪಾನ, ಮಾದಕ ವಸ್ತುಗಳ ಸೇವನೆಯ ಚಟ/ವ್ಯಸನ
- ✓ ಇಳಿವಯಸ್ಸಿನ ಸಮಸ್ಯೆಗಳು
- ✓ ದಾಂಪತ್ಯ ಸಮಸ್ಯೆಗಳು
- ✓ ಕೌಟುಂಬಿಕ ಸಮಸ್ಯೆಗಳು

**ಆಪ್ತ ಸಮಾಲೋಚನಾ ತರಬೇತಿ**
(ಸಂಯೋಜಕರು: ಶ್ರೀ ಎ.ಎಸ್. ರಾಮಚಂದ್ರ, ಮೊ: 9902057857
ಪ್ರತಿ ಭಾನುವಾರ ಬೆಳಿಗ್ಗೆ 11 ರಿಂದ 1.00
ಅವಧಿ 10 ದಿನ (ಆಫ್‌ಲೈನ್)
ಒಂದು ತಂಡದಲ್ಲಿ 60 ಜನರಿಗೆ ಅವಕಾಶ
ಪ್ರಮಾಣಪತ್ರ ವಿತರಣೆ. ಶುಲ್ಕ 3000/– ರೂಪಾಯಿಗಳು

**ಪದ್ಮಶ್ರೀ ಡಾ. ಸಿ.ಆರ್. ಚಂದ್ರಶೇಖರ್**
ವಿಶ್ರಾಂತ ಪ್ರಾಧ್ಯಾಪಕರು, ನಿಮ್ಹಾನ್ಸ್,
ಸಮಾಧಾನ ಕೆಂದ್ರ, ಬೆಂಗಳೂರು–560078
ದೂರವಾಣಿ: 080–26482929 ಮೊಬೈಲ್: 9845605615



# ಸಂಪಾದಕೀಯ

ದಿನಾಂಕ: 16–12–2024ರಂದು ವೇದಿಕೆಯ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ತೀರ್ಮಾನವಾದಂತೆ ವೇದಿಕೆಯ ವತಿಯಿಂದ ಸಾರ್ವಜನಿಕರಿಗೆ ಉಪಯುಕ್ತವಾಗುವ ಜನಪ್ರಿಯ ಆರೋಗ್ಯ ಪುಸ್ತಕಗಳನ್ನು ಪ್ರಕಟಿಸುವುದಾಗಿದೆ. ಈ ತೀರ್ಮಾನದಂತೆ 8–3–2025ರಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ನಮ್ಮ ವೇದಿಕೆಯ ಗೌರವಾನ್ವಿತ ಮುಖ್ಯ ಮಾರ್ಗದರ್ಶಿಗಳಾದ ಪದ್ಮಶ್ರೀ ಡಾ. ಸಿ. ಆರ್. ಚಂದ್ರಶೇಖರ್ ಅವರು ರಚಿಸಿದ "ಚಿಂತೆ ಬಿಡು ಮನವೇ" ಎಂಬ ಕನ್ನಡ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಲೇಖಕರ ಎಲ್ಲ ಪುಸ್ತಕಗಳಂತೆ ಇದು ಸಹಾ ಜನಮನ್ನಣೆ ಗಳಿಸಿ ಓದುಗರನ್ನು ತಲುಪುತ್ತಿದೆ.

ಇನ್ನೊಂದು ವಿಶೇಷವೆಂದರೆ ಈ ಪುಸ್ತಕವು ಇಂಗ್ಲಿಷ್ ಭಾಷೆಗೆ ಅನುವಾದವಾಗಿ ಪ್ರಕಟವಾಗಿದೆ. ಸಮಾಧಾನ ಆಪ್ತಸಲಹಾ ಕೇಂದ್ರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರಿಂದ ಇಂಗ್ಲಿಷ್ ಆವೃತ್ತಿ ಪ್ರಕಟವಾಗಿದೆ. (ಪುಟಗಳು 90, ಬೆಲೆ: ರೂ.100).

"ಚಿಂತೆ ಬಿಡು ಮನವೇ" ಪುಸ್ತಕದ ನೂರಾರು ಪ್ರತಿಗಳು ಈಗಾಗಲೇ ಓದುಗರ ಕೈ ಸೇರಿ, ಇನ್ನೇನು ಈ ಪುಸ್ತಕ ಮರುಮುದ್ರಣವಾಗುವ ಹಂತದಲ್ಲಿದೆ. ಈ ಪುಸ್ತಕದ ಇಂಗ್ಲಿಷ್ ಅನುವಾದ ``Stop Worrying, Be Happy and Healthy" ಮೇ, 2025ರಲ್ಲಿ ಪ್ರಕಟವಾಗಿದೆ.

ಡಾ. ಸಿ. ಆರ್. ಚಂದ್ರಶೇಖರ್ ಅವರ ಇನ್ನೊಂದು ಕೃತಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾದ 'ನೆನಪಿನ ಶಕ್ತಿ, ಜೀವನ ಕೌಶಲ್ಯಗಳು" ಎಂಬ ಕೃತಿ ಸಹಾ 2025ರಲ್ಲಿ ಪ್ರಕಟವಾಗಿ, ಈ ಪುಸ್ತಕದ ಇಂಗ್ಲಿಷ್ ಆವೃತ್ತಿ "Improve Memory, Intelligence and Life Skills'' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಇದರ ಪ್ರಕಾಶಕರು ಸಹಾ ಸಮಾಧಾನ ಆಪ್ತಸಲಹಾ ಕೇಂದ್ರ, ಬೆಂಗಳೂರು ಇವರೇ ಆಗಿದ್ದಾರೆ.



ಇದೀಗ ಮುಂದಿನ ಸಮಾಧಾನ ಕೇಂದ್ರದ ಪ್ರಕಟಣೆಯಾಗಿ, "Why and How to Prevent Suicides" ಎಂಬ ಇಂಗ್ಲಿಷ್ ಕೃತಿ ಹೊರಬಂದಿದೆ. ಮಾನಸಿಕ ಆರೋಗ್ಯ ಸಾಹಿತ್ಯಾಸಕ್ತರಿಗೆ ಸಮಾಧಾನ ಕೇಂದ್ರದಿಂದ ಭರಪೂರ ಕೃತಿಗಳು ಒದಗುತ್ತಿವೆ. ಓದುಗರಾದರೂ ಬಹಳ ಉತ್ಸುಕತೆಯಿಂದ ಕೃತಿಗಳನ್ನು ಕೊಂಡು ಓದುತ್ತಿರುವುದು ಶುಭ ಸೂಚನೆಯಾಗಿದೆ.

ಒಟ್ಟಾರೆ ಜನಸಾಮಾನ್ಯರಿಗೆ ಮಾನಸಿಕ ಆರೋಗ್ಯದ ಬಗ್ಗೆ ಸಾಧ್ಯವಾದಷ್ಟು ಮಾಹಿತಿಯನ್ನು ಒದಗಿಸುವಲ್ಲಿ ನಮ್ಮ ಪ್ರಯತ್ನ ಸಾಗಿದೆ. ಈ ಸಂಚಿಕೆಯ ಒಳಪುಟಗಳಲ್ಲಿ ಇಂಥಾ ಅನೇಕ ಕನ್ನಡ, ಇಂಗ್ಲಿಷ್ ಕೃತಿಗಳ ಪರಿಚಯವನ್ನು ಕೊಡಲಾಗಿದೆ. ಪಸ್ತುತ ಈ ಕೃತಿಗಳೆಲ್ಲ ಬನ್ನೇರುಘಟ್ಟದಲ್ಲಿರುವ ಸಮಾಧಾನ ಆಪ್ತಸಲಹಾ ಕೇಂದ್ರದಲ್ಲಿ ದೊರೆಯುತ್ತಿವೆ.

ವೇದಿಕೆಯು ಅನೇಕ ತಜ್ಞ ವೈದ್ಯರನ್ನು ಆಹ್ವಾನಿಸಿ, ಅವರಿಂದ ಉಪನ್ಯಾಸಗಳನ್ನು ಏರ್ಪಡಿಸಿದೆ. ಅಂತೆಯೇ ಆನ್‌ಲೈನ್‌ನಲ್ಲಿಯೂ ಆಗಾಗ್ಗೆ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ.

2025ರ ವೇದಿಕೆಯ ವಾರ್ಷಿಕ ಸರ್ವಸದಸ್ಯರ ಸಭೆ ದಿ: 2–9–2025ರಂದು ಸಮಾಧಾನ ಆಪ್ತಸಲಹಾ ಕೇಂದ್ರದಲ್ಲಿ ನಡೆಯಿತು. ಈ ಸಭೆಯ ಸಂಕ್ಷಿಪ್ತ ವರದಿಯನ್ನು ಇದೇ ಸಂಚಿಕೆಯಲ್ಲಿ ಕೊಡಲಾಗಿದೆ.

ಓದುಗರ ಸಲಹೆ–ಸೂಚನೆಗಳನ್ನು ಸ್ವಾಗತಿಸುತ್ತೇವೆ.

**-ಡಾ. ಎನ್. ಗೋಪಾಲಕೃಷ್ಣ, ಸಂಪಾದಕರು**

**ಒಳಪುಟಗಳಲ್ಲಿ**


1. ಅಧ್ಯಕ್ಷರ ನುಡಿ – 2
2. ಸಂಪಾದಕೀಯ – 4
3. ಅಂತರರಾಷ್ಟ್ರೀಯ ವೈದ್ಯ ದಿನಾಚರಣೆ – 5
4. ಖಿನ್ನತೆ, ಲಕ್ಷಣಗಳು, ಪರಿಹಾರೋಪಾಯಗಳು – 6
5. ಹುಸಿನಂಬಿಕೆಗಳಿಂದ ದೂರ ಇರುವುದು ಒಳ್ಳೆಯದು – 8
6. ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ – 9
7. ಸ್ಕಿಜೋಫ್ರೀನಿಯಾ ಮತ್ತು ಕುಟುಂಬ ಸಮಾಲೋಚನೆ – 11
8. ಡಾ: ಸಿ.ಆರ್.ಸಿ. ಯವರ ಕಾರ್ಯಕ್ರಮಗಳು – 13
9. ವೈದ್ಯ ಪುಸ್ತಕಾವಲೋಕನ – 14
10. ಶಾಲೆಗಳಿಗೆ ಬೇಕಿದೆ ಮಾನಸಿಕ ತಜ್ಞರು – 15
11. Worry of Students - 16
12. Life Skills & Adolesscents - 18
13. Don't Neglect Suicide Tendency - 19


## ಕನಸು ನನಸಾಗುವುದೇ?

ಇದ್ದಾರಾ ಯಾರಾದರೂ ಕನಸು ಕಾಣದವರು?
ಎಲ್ಲರೂ ಹಗಲೋ ರಾತ್ರಿಯೋ ಕನಸು ಕಾಣುವರು!
ಕಂಡ ಕನಸುಗಳ ಪರಿಯನ್ನು ವರ್ಣಿಸುವರು!!
ದೇವರು, ದೆವ್ವಗಳು, ಸತ್ತವರು, ಸಾಯದವರು
ತಾವು ಗೆದ್ದಂತೆ, ಬಿದ್ದಂತೆ, ಶ್ರೀಮಂತರಾದಂತೆ
ಚಿತ್ರ ವಿಚಿತ್ರ ಕೇಳರಿಯದ, ಕಂಡರಿಯದ ವಿಷಯ ಸಂತೆ!
ಕೆಲವು ಹಿತ ಕೆಲವು ಅಹಿತ, ಅಚ್ಚರಿ, ಭಯಾನಕ
ಬಿದ್ದ ಕನಸುಗಳು ನಿಜವಾಗುವುವೇ, ಭವಿಷ್ಯ ಸೂಚಕವೇ
ಇನ್ನು ಹಗಲುಗನಸುಗಳು, ನಾವೇ ಸೃಷ್ಟಿಸುವ ಚಿತ್ರಗಳು
ನಮ್ಮ ಆಸೆ–ಆಕಾಂಕ್ಷೆಗಳ ನವಿಲು ಕುಣಿಯುತ್ತದೆ
ಹುಡುಗ–ಹುಡುಗಿಯ ಪ್ರೇಮ, ಕಾಮದ ಕಥೆ
ವಿದ್ಯಾರ್ಥಿ ರ‍್ಯಾಂಕ್ ಪಡೆದು, ವೈದ್ಯನೋ ವಿಜ್ಞಾನಿ ಆದಂತೆ
ನಿರುದ್ಯೋಗಿ ಆರಂಕಿ ಸಂಬಳದ ಉದ್ಯೋಗ ಪಡೆದಂತೆ
ನಟಿಸಿದ ಸಿನೇಮಾ 10 ದಿನದಲ್ಲಿ ನೂರು ಕೋಟಿ ಗಳಿಸಿದಂತೆ
ದೇವರು ಪ್ರತ್ಯಕ್ಷನಾಗಿ ಹತ್ತಾರು ವರಗಳ ಕರುಣಿಸಿದಂತೆ
ಎಲ್ಲ ಮನಸ್ಸಿನ ನಾಟಕ, ಕಲ್ಪನಾ ವಿಲಾಸ!

–ಡಾ॥ ಸಿ.ಆರ್. ಚಂದ್ರಶೇಖರ್

# ಕ್ಯಾನ್ಸರ್ ಕಾಯಿಲೆಯ ಬಗ್ಗೆ ಅನಗತ್ಯ ಭಯ ಬೇಡ. ಸಾರ್ವಜನಿಕರು ಮಾಹಿತಿ ಹೊಂದಿರಬೇಕು

'ಕ್ಯಾನ್ಸರ್' ಎಂದಾಕ್ಷಣ ಜನಸಾಮಾನ್ಯರಿಗೆ ಭಯವೇ ಹೆಚ್ಚಾಗಿದೆ. ಕಾಯಿಲೆಯ ಲಕ್ಷಣಗಳು ಹಾಗೂ ಬಾರದಂತೆ ತಡೆಗಟ್ಟುವ ಬಗ್ಗೆ ಎಚ್ಚರಿಕೆ ವಹಿಸಬೇಕು. ಎಲ್ಲ ಕ್ಯಾನ್ಸರ್‌ಗಳೂ ಪ್ರಾಣಾಂತಕವಲ್ಲ.



ಇದೇ ಜುಲೈ 5, 2025ರಂದು ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆಯು ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆಯಂದು ಮುಖ್ಯ ಅತಿಥಿಗಳಾಗಿದ್ದ ಡಾ. ಕಿರಣ್‌ಕುಮಾರ್ ಸಜ್ಜನ್‌ಶೆಟ್ಟಿ ಅವರು ಕ್ಯಾನ್ಸರ್ ಕಾಯಿಲೆಯ ಕುರಿತಾದ ವಿವರಣೆಗಳನ್ನು ನೀಡುತ್ತಾ ಈ ಕೆಳಕಂಡ ಕಾರಣಗಳಿಂದ ಕ್ಯಾನ್ಸರ್ ಉಂಟಾಗುತ್ತದೆಂಬುದಾಗಿ ವಿವರಿಸಿದರು:

**1. ಜೀವನಶೈಲಿ ಹಾಗೂ ಪರಿಸರದಿಂದ**

ಅ) **ತಂಬಾಕು ಬಳಕೆ:** ಸಿಗರೇಟು ಸೇದುವುದು, ತಂಬಾಕನ್ನು ಅಗಿಯುವುದು, ಇನ್ನೊಬ್ಬರ ಧೂಮಪಾನದಿಂದ ಹೊಗೆ ಸೇವನೆ.

ಆ) **ಮದ್ಯಪಾನ:** ಅತಿಯಾಗಿ ಮತ್ತು ನಿಯಮಿತವಾಗಿ ಮದ್ಯಪಾನ ಮಾಡುವುದು

ಇ) **ಆಹಾರ:** ಸಂಸ್ಕರಿಸಿದ ಕೆಂಪು ಮಾಂಸವನ್ನು ಹೆಚ್ಚಾಗಿ ಸೇವಿಸುವುದು, ಕೊಬ್ಬಿನಂಶವುಳ್ಳ, ಸಕ್ಕರೆಯಂಶವುಳ್ಳ ಅಥವಾ ಅತಿಯಾಗಿ ಸಂಸ್ಕರಿಸಿದ ಆಹಾರ ಸೇವನೆ, ಕಡಿಮೆ ಹಣ್ಣು, ತರಕಾರಿಗಳ ಸೇವನೆ.

ಈ) **ದೈಹಿಕ ಚಟುವಟಿಕೆಗಳು ಇಲ್ಲದಿರುವಿಕೆ:** ಅತಿ ಕಡಿಮೆ ಹಾಗೂ ಯಾವುದೇ ದೈಹಿಕ ಚಟುವಟಿಕೆ ಇಲ್ಲದಿರುವುದು.

ಉ) **ಬೊಜ್ಜುತನ:** ಅತಿಯಾದ ತೂಕ ಇರುವುದು. ಇದರಿಂದಲೂ ಅಪಾಯ ಹೆಚ್ಚು.

ಊ) **ಸೂರ್ಯನ ಬೆಳಕಿಗೆ ದೇಹ ಒಡ್ಡಿರುವುದು:** ಯಾವುದೇ ರಕ್ಷಣೆ ಮಾಡಿಕೊಳ್ಳದೆ, ಅತಿ ವಿಕಿರಣಗಳಿಗೆ ವ್ಯಕ್ತಿಗಳ ದೇಹವನ್ನು ಒಡ್ಡುವುದು.

ಋ) **ಕ್ಯಾನ್ಸರ್‌ಕಾರಕ ವಸ್ತುಗಳಿಗೆ ದೇಹ ಒಡ್ಡಲ್ಪಡುವುದು:** ಆಸ್ಬೆಸ್ಟಾಸ್, ಬೆಂಜೀನ್, ಕೀಟನಾಶಕಗಳು, ಮಲಿನಕಾರಕಗಳು ಮತ್ತು ಕೈಗಾರಿಕೆಗಳ ವಿಷಕಾರಕ ವಸ್ತುಗಳಿಗೆ ದೇಹ ಒಡ್ಡಲ್ಪಡುವುದು.

**2. ಸೋಂಕುಗಳು**

ಅ) ಸರ್ವೈಕಲ್, ಗುದದ್ವಾರದ ಮತ್ತು ಬಾಯಿಯ ಕ್ಯಾನ್ಸರ್‌ಗಳು

ಆ) ಹೆಪಟೈಟಿಸ್ ಬಿ ಮತ್ತು ಸಿ ವೈರಸ್‌ಗಳು: ಲಿವರ್ ಕ್ಯಾನ್ಸರ್

ಇ) ಹೆಲಿಕೋಬ್ಯಾಕ್ಟರ್ ಪೈಲೋರಿ: ಬ್ಯಾಕ್ಟೀರಿಯಾ. ಉದರದ ಕ್ಯಾನ್ಸರ್

ಈ) ಎಪ್‌ಸ್ಟೀನ್ ಬಾರ್ ವೈರಸ್: ಲಿಂಫೋಮಾ ಹಾಗೂ ಕೆಲವು ನೇಸೋಫ್ಯಾರಿಂಜಿಯಲ್ ಕ್ಯಾನ್ಸರ್

ಉ) ಎಚ್‌ಐವಿ ಸೋಂಕು: ಕಾಪೋಸೀಸ್ ಸಾರ್ಕೋಮಾ, ಲಿಂಫೋಮಾ ಮತ್ತು ಸರ್ವೈಕಲ್ ಕ್ಯಾನ್ಸರ್‌ಗಳ ಹೆಚ್ಚಿದ ಅಪಾಯ.

ಕಡಿಮೆ ಮದ್ಯ ಸೇವನೆಯಿಂದ ಈ ಕೆಳಕಂಡ 7 ಬಗೆಯ ಕ್ಯಾನ್ಸರ್‌ಗಳನ್ನು ತಡೆಗಟ್ಟಬಹುದು:

1. ಬಾಯಿ 2. ಗಂಟಲು 3. ಅಂಗುಳು 4. ಅನ್ನನಾಳ 5. ಎದೆ 6. ಜಠರ 7. ಗುದದ್ವಾರ

**ಬ್ರೆಸ್ಟ್ ಕ್ಯಾನ್ಸರ್ ವಾರ್ನಿಂಗ್‌ಗಳು**

1. ನಿಪ್ಪಲ್ (ಮೊಲೆತೊಟ್ಟು) ನಿಂದ ಸ್ರವಿಸುವಿಕೆ.
2. ಕಂಕುಳಿನಲ್ಲಿ ನೋವು
3. ಚರ್ಮದ ಕಿರಿಕಿರಿ
4. ಮೊಲೆತೊಟ್ಟಿನಲ್ಲಿ ಬಿರುಕು
5. ಡಿಂಪ್ಲಿಂಗ್
6. ಚರ್ಮದ ರಚನೆಯಲ್ಲಿ ವ್ಯತ್ಯಯ
7. ಎದ್ದು ಕಾಣುವ ಊತ
8. ಚರ್ಮವು ಆರೆಂಜ್‌ಪೀಲ್‌ನಂತೆ ಕಾಣುವುದು

**ಕ್ಯಾನ್ಸರ್ ತಪಾಸಣೆ**

* 40 ವರ್ಷ ವಯಸ್ಸಿನ ನಂತರ ಸ್ತ್ರೀಯರಿಗೆ ಮ್ಯಾಮೊಗ್ರಾಂ ಎಂಬ ಪರೀಕ್ಷೆ
* 21 ವರ್ಷದ ನಂತರ ಪ್ರತಿ 3 ವರ್ಷಕ್ಕೊಮ್ಮೆ ಸರ್ವೈಕಲ್ ಪಾಪ್‌ಸ್ಮಿಯರ್ ಪರೀಕ್ಷೆ



* ವಿಶೇಷವಾಗಿ ತಂಬಾಕು ಅಗಿಯುವವರಿಗೆ ನಿಯಮಿತವಾಗಿ ಬಾಯಿ ಪರೀಕ್ಷೆ
* 50 ವರ್ಷದ ನಂತರ ಕೋಲನ್ ಪರೀಕ್ಷೆ

**ಇತರೆ ವಾರ್ನಿಂಗ್ ಸೂಚನೆಗಳು**

1. ಮಲವಿಸರ್ಜನೆಯಲ್ಲಿ ವ್ಯತ್ಯಾಸಗಳು
2. ಮೊಲೆಯ ಮೇಲೆ ಇರುವ ಗಂಟು ಗಟ್ಟಿಯಾಗುತ್ತ ಹೋಗುವುದು
3. ಅಸಾಮಾನ್ಯವಾದ ರಕ್ತಸ್ರಾವ
4. ಅಜೀರ್ಣ ಅಥವಾ ನುಂಗಲು ಕಷ್ಟವಾಗುವುದು
5. ಕೆಮ್ಮುವುದು ಅಥವಾ ಗಂಟಲಿನಲ್ಲಿ ಒರಟುತನ ಉಂಟಾಗುವುದು

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜನರಲ್ ಫಿಸಿಷಿಯನ್ ಡಾ. ಲಕ್ಷ್ಮೀಕಾಂತ್ ಅವರು ಮಾತನಾಡಿ, ಆಪ್ತಸಮಾಲೋಚಕರು ಇಲ್ಲಿ ಸೇರಿ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸಲಹೆ ಸಮಾಧಾನ ಒದಗಿಸುವ ಕಾರ್ಯದಲ್ಲಿ ನಿರತರಾಗಿರುವುದು ಪ್ರಶಂಸನೀಯ ಎಂದು ತಿಳಿಸಿದರು.

ವೇದಿಕೆಯ ಅಧ್ಯಕ್ಷರಾದ ಡಾ. ಸುವರ್ಣ ಅಮರನಾಥ್ ಅವರು ವೈದ್ಯ ವಿದ್ಯಾರ್ಥಿಗಳ ಕಾಲೇಜು ಅಧ್ಯಯನ ಪ್ರಾರಂಭಿಸುವ ಮುನ್ನ ಹಿಪ್ಪೊಕ್ರೆಟಿಸ್‌ನ ಪ್ರಮಾಣ ವಚನವನ್ನು ಸ್ವೀಕರಿಸಿ ರೋಗಿಯ ಸೇವೆಯಲ್ಲಿ ತಾವು ತೊಡಗಿಕೊಳ್ಳುವಿಕೆ ಬಗ್ಗೆ ಪ್ರಮಾಣ ಮಾಡುವ ವಿಧಿಯ ಬಗ್ಗೆ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪದ್ಮಶ್ರೀ ಡಾ. ಸಿ.ಆರ್. ಚಂದ್ರಶೇಖರ್ ಅವರಿಗೆ ಇತ್ತೀಚೆಗೆ TIMES NOW ಸಂಸ್ಥೆಯು ಪ್ರಶಸ್ತಿಯನ್ನು ಕೊಡಮಾಡಿತ್ತು. ಅಲ್ಲದೆ ಶಿವಮೊಗ್ಗದ ಕನ್ನಡ ಸಂಘವೂ ಅವರಿಗೆ ವೈದ್ಯದಿನದ ಅಂಗವಾಗಿ ಪ್ರಶಸ್ತಿಯನ್ನು ಪ್ರದಾನ ಮಾಡಿ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆಯ ಉಪಾಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಹಾಗೂ ಕಾರ್ಯಕಾರೀ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

★

# ಖಿನ್ನತೆಯ ಲಕ್ಷಣಗಳು, ಪರಿಹಾರೋಪಾಯಗಳು

ಅಮೇರಿಕಾದ ಸೆಂಟ್ ಲೂಸಿಯಾ ವಿಶ್ವವಿದ್ಯಾಲಯದಲ್ಲಿ ಅಲ್ಲಿನ ಮೆಡಿಕಲ್ ಬೋರ್ಡ್‌ನ ಅಧ್ಯಕ್ಷರೂ, ಸರಕಾರಿ ಆರೋಗ್ಯ ಪ್ರಾಧಿಕಾರ, ಸೆಂಟ್ ಲೂಸಿಯಾದಲ್ಲಿ ಕನ್ಸಲ್ಟೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ಕನ್ನಡಿಗ ಡಾ. ಗುರುಮೂರ್ತಿಯವರು ದಿನಾಂಕ 21.5.2025ರಂದು ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ ಮತ್ತು ಸಮಾಧಾನ ಆಪ್ತಸಲಹಾ ಕೇಂದ್ರಗಳ ಆಶ್ರಯದಲ್ಲಿ “ಖಿನ್ನತೆ–ಅದರ ಲಕ್ಷಣಗಳು ಮತ್ತು ಪರಿಹಾರೋಪಾಯಗಳು” ಎಂಬ ಬಗ್ಗೆ ಒಂದು ಗಂಟೆಯ ಸುದೀರ್ಘ ಉಪನ್ಯಾಸವನ್ನು ನಡೆಸಿಕೊಟ್ಟರು.

ಖಿನ್ನತೆಯ ಸಾಮಾನ್ಯ ಲಕ್ಷಣಗಳಾದ ವ್ಯಕ್ತಿಯ ಮೂಡ್ ವ್ಯತ್ಯಾಸವಾಗುವಿಕೆ, ಚಟುವಟಿಕೆ ಕಡಿಮೆಯಾಗುವುದು, ಒಂಟಿತನ, ಹಸಿವಾಗದಿರುವಿಕೆ, ಅತಿಯಾದ ಆಲಸಿತನ, ಕೊನೆಗೆ ಆತ್ಮಹತ್ಯೆಯ ಆಲೋಚನೆ, ಪ್ರಯತ್ನಗಳ ಬಗ್ಗೆ ಚರ್ಚಿಸಿದರು. ಜೈವಿಕ, ಸಾಮಾಜಿಕ ಮುಂತಾದ ಬಹುವಿಧ (multifactorial) ವಿಷಯಗಳಿಂದಾಗಿ ಖಿನ್ನತೆಗೊಳಗಾಗುವ ಸಾಧ್ಯತೆಗಳಿರುತ್ತವೆ. ಸುಮಾರು 2 ವಾರಗಳಿಗೂ ಹೆಚ್ಚಿನ ಅವಧಿ ಮೇಲ್ಕಂಡ ಲಕ್ಷಣಗಳಿದ್ದಾಗ ವ್ಯಕ್ತಿಗಳಿಗೆ ಆಪ್ತ ಸಮಾಲೋಚನೆ, ಔಷಧಗಳ ಮೂಲಕ ಚಿಕಿತ್ಸೆ ಮಾಡಲಾಗುತ್ತದೆ.

ಮಿದುಳಿನಲ್ಲಿ ಉಂಟಾಗುವ ಅನೇಕ ನ್ಯೂರೋ ಟ್ರಾನ್ಸ್‌ಮಿಟರ್‌ಗಳ ವ್ಯತ್ಯಯ ಇದಕ್ಕೆ ಕಾರಣ.

ಭಾರತದಲ್ಲಿ ಹೆಚ್ಚು ಮಹಿಳೆಯರು ಆತ್ಮಹತ್ಯೆ ಪ್ರಯತ್ನ ಮಾಡುವವರಾದರೂ ಆತ್ಮಹತ್ಯೆಯಿಂದ ಪ್ರಾಣ ಕಳೆದುಕೊಳ್ಳುವವರು ಪುರುಷರೇ ಹೆಚ್ಚು.

ಮಾದಕ ವಸ್ತು ವ್ಯಸನಿಗಳೂ ಖಿನ್ನತೆಗೆ ತುತ್ತಾಗುತ್ತಾರೆ. (Psychoactive substance use) ಇದರಲ್ಲಿ ಮದ್ಯ, ಗಾಂಜಾ, ಅಫೀಮುಗಳೆಲ್ಲ ಸೇರುತ್ತವೆ.

ಖಿನ್ನತೆ ಎಲ್ಲ ದೇಶಗಳಲ್ಲೂ, ಎಲ್ಲ ಜನರಲ್ಲೂ ಉಂಟಾಗಬಹುದು. ಅಮೇರಿಕಾದಲ್ಲಿ ಅತಿಯಾದ ಒತ್ತಡ, ತನ್ಮೂಲಕ ಖಿನ್ನತೆಗೆ ಒಳಗಾಗುವ ಒಬ್ಬರಾದರೂ ಸಾಯುವ ವೈದ್ಯರಿದ್ದಾರೆ. ಅಂದಮೇಲೆ ಜನಸಾಮಾನ್ಯರ ಗತಿಯೇನು?

ನಕಾರಾತ್ಮಕ ಆಲೋಚನೆ ಮಾಡುವವರಿಗೆ ಕಾಗ್ನಿಟಿವ್ ಥೆರಪಿ ಚಿಕಿತ್ಸೆ ಕೊಡಬಹುದು. ‘ಕಾಗ್ನಿಷನ್’ ಎಂದರೆ ಆಲೋಚನೆ, ‘ನಾನು ಚೆನ್ನಾಗಿ ಇರಬೇಕು’, ‘ನಾನು ಸುಂದರವಾಗಿ ಕಾಣಬೇಕು’ ಎಂಬ ಆಲೋಚನೆಗಳು.




ತಪ್ಪು ನಂಬಿಕೆಗಳಿಗೆ ಒಳಗಾದವರು (delusion) ಭ್ರಮೆಗೆ (hallucination) ಒಳಪಟ್ಟವರು, ಏನೂ ಮಾತನಾಡದೆ ಮೌನಿಯಾದ catatonic depressionಗೆ ಒಳಗಾದವರು, psychotic depressionಗೆ ಒಳಗಾದವರು ಇವರಿಗೆಲ್ಲ ಚಿಕಿತ್ಸೆ ಅಗತ್ಯವಾಗುತ್ತದೆ.

**ಗ್ರಾಮೀಣ ಪ್ರದೇಶಗಳಲ್ಲಿ**

ಬೆಳೆ ನಾಶದಿಂದಾಗಿ, ಮಕ್ಕಳು–ಮರಿಗಳ ಅಗಲಿಕೆಯಿಂದಾಗಿ ಖಿನ್ನತೆಗೆ ಒಳಗಾಗುವ ಜನ ಗ್ರಾಮೀಣ ಪ್ರದೇಶಗಳಲ್ಲಿ ಇದ್ದಾರೆ. ಆದರೆ, ಅನೇಕರಿಗೆ ಆ ಬಗ್ಗೆ ಅವರಿಗೆ ತಿಳಿವಳಿಕೆಯಾಗಲೀ, ಮಾಹಿತಿಯಾಗಲೀ ಇಲ್ಲ. ವ್ಯವಸಾಯಕ್ಕಾಗಿ ತಾವು ಮಾಡಿದ ಸಾಲವನ್ನು ಹಿಂತಿರುಗಿಸಲಾಗದೆ ಆತ್ಮಹತ್ಯೆಗೆ ಶರಣಾಗುವ ರೈತರೇ ಹೆಚ್ಚು. ಮಾನ–ಮರ್ಯಾದೆಗಳಿಗೆ ಅಂಜಿ ಪ್ರಾಣತ್ಯಾಗ ಮಾಡುವವರು ಉಂಟು.

**ಪರಿಹಾರೋಪಾಯಗಳು**

ಖಿನ್ನತೆಯನ್ನು ಗುರುತಿಸುವ ಕೌಶಲ್ಯವನ್ನು ಹೊಂದಿರಬೇಕು. ಗುರುತಿಸುತ್ತಿದ್ದಂತೆಯೇ ಆಪ್ತಸಲಹೆ, ಔಷಧಿ ಚಿಕಿತ್ಸೆಯನ್ನು ಅವರಿಗೆ ದೊರಕಿಸಿಕೊಡಬೇಕು.

ವ್ಯಕ್ತಿ ವ್ಯಕ್ತಿಗೆ ರೋಗ ನಿರ್ಣಯ ವಿಭಿನ್ನವಾಗಿರುತ್ತದೆ. ಚಿಕಿತ್ಸೆಯೂ ಅಷ್ಟೆ. ಕೆಲವರಿಗೆ ಆಪ್ತಸಲಹೆ ಸಾಕಾದರೆ, ಮತ್ತೆ ಕೆಲವರಿಗೆ ಔಷಧಿ ಬೇಕಾಗುತ್ತದೆ.

ಕಾಗ್ನಿಟಿವ್ ಥೆರಪಿ, ವರ್ತನ ಚಿಕಿತ್ಸೆ (behavior therapy) ಬೇಕಾಗುತ್ತದೆ.

ಕೆಲವು ಕುಟುಂಬಗಳಲ್ಲೇ ಸಮಸ್ಯೆ ಇದ್ದು ತಂದೆ ಅಥವಾ ತಾಯಿಗೇ ಚಿಕಿತ್ಸೆ ಅಗತ್ಯವಾಗುತ್ತದೆ. ಇಂಥಾ ಸಂದರ್ಭಗಳಲ್ಲಿ ಹಿರಿಯರಿಗೆ ಮನವರಿಕೆ ಮಾಡಿ, ಅವರಿಗೆ ತಿಳಿವಳಿಕೆ ಕೊಡುವುದು ಚಿಕಿತ್ಸಕರಿಗೆ ಒಂದು ಸಾಹಸವೇ ಆಗುತ್ತದೆ.

**ಖಿನ್ನತೆ – ಮರೆವು**

ಮರೆವು (dementia) ನಿಂದಲೂ ಖಿನ್ನತೆ ಉಂಟಾಗಬಹುದು. ವಯಸ್ಸಾದವರಲ್ಲಿ ಉಂಟಾಗುವ pseudo dementiaವನ್ನು ಮರೆವು ಎನ್ನಲಾಗುತ್ತದೆ. ಈಚಿನ ದಿನಗಳಲ್ಲಿ ವ್ಯಕ್ತಿಗಳ ಸರಾಸರಿ ಜೀವಿತಾವಧಿ ಹೆಚ್ಚಾಗಿ ಜನ ಹೆಚ್ಚು ಕಾಲ ಬದುಕುತ್ತಾರೆ. ಹೆಚ್ಚು ಕಾಲ ಇದ್ದಂತೆ ಒಂದಲ್ಲ ಒಂದು ಕಾಯಿಲೆ ಉಂಟಾಗುತ್ತದೆ.

ಇದಕ್ಕೆ ಸಹಾ ಪರಿಹಾರೋಪಾಯವಾಗಿ ವಯಸ್ಸಾದವರು ಚಟುವಟಿಕೆಯಿಂದಿರಲು ಸಲಹೆ ಮಾಡಲಾಗಿದೆ.

ಬಿಪಿ, ಸಕ್ಕರೆ ಕಾಯಿಲೆಗಳಿದ್ದಾಗ ಬರುವ ಖಿನ್ನತೆಯು vascular dementia ಆಗಿರುತ್ತದೆ.

ಹೆಚ್ಚು ವಯಸ್ಸಾಗುತ್ತಿದ್ದಂತೆ delirium (confusion) ಗೊಂದಲ ಉಂಟಾಗುತ್ತದೆ.

ಆಲ್ಜೀಮರ್ಸ್, ಡಿಮನ್ಷಿಯಾದಿಂದ ಮಿದುಳಿನಲ್ಲಿ neuronal dots ಉಂಟಾಗುವ ಕಾರಣ ಮರೆವು ಉಂಟಾಗುತ್ತದೆ.

**ಖಿನ್ನತೆ ಚಿಕಿತ್ಸೆಯಲ್ಲಿ ಪೋಷಕರ ಪಾತ್ರ**


ತಮ್ಮ ಮಕ್ಕಳು ಶಾಲೆಗೆ ಹೋಗಿ, ಸಹಪಾಠಿಗಳ ಒತ್ತಡದಿಂದಾಗಿ ಖಿನ್ನತೆಗೆ ಒಳಗಾದುದನ್ನು, ಪೋಷಕರು ಹೆಚ್ಚು ಜಾಗೃತರಾಗಿ ಮಗುವನ್ನು ಶಾಲೆ ಬಿಡಿಸಿ ಬಂದು ಮನೆಯಲ್ಲೇ ಶಿಕ್ಷಣ ಕೊಡಿಸಿ, ಮುಂದೆ ಆ ಮಗು ತನ್ನಿಂತಾನೇ ಅರಿವು ಮೂಡಿಸಿಕೊಂಡು ಪರೀಕ್ಷೆಗಳಲ್ಲಿ ಬರೆದು, ಚೆನ್ನಾಗಿ ಅಂಕಗಳನ್ನು ಗಳಿಸಿದ ಉದಾಹರಣೆಗಳನ್ನು ಪೋಷಕರು ತಿಳಿಸಿದರು. ಅಂದರೆ, ಮಗುವಿನ ಮೇಲೆ ಪೋಷಕರು ಒತ್ತಡ ಹೇರದೆ, ಶಿಕ್ಷಣವನ್ನು ಸುಸೂತ್ರವಾಗಿ ನಿರ್ವಹಿಸಿದ ಉದಾಹರಣೆಯನ್ನು ತಿಳಿಸಿದರು.

ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆಯ ಹಲವು ಸದಸ್ಯರು, ಕಾರ್ಯಕಾರೀ ಸಮಿತಿಯವರೂ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಡಾ. ಗುರುಮೂರ್ತಿಯವರು ಭಾಗವಹಿಸಿದವರೆಲ್ಲರ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಕೊಡುವ ಮೂಲಕ ಉಪನ್ಯಾಸ ತುಂಬ ಉಪಯುಕ್ತ, ಮಾಹಿತಿಪೂರ್ಣ ಎಂಬುದಾಗಿ ಎಲ್ಲರೂ ಅಭಿಪ್ರಾಯಪಟ್ಟರು. ★

# ಅಕ್ಟೋಬರ್ 10, ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ 2025

ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಪ್ರತಿ ವರ್ಷ ಅಕ್ಟೋಬರ್ ತಿಂಗಳ 10 ಕೇವಲ ದಿನಾಂಕವಲ್ಲ, ಒಂದು ವಿಶೇಷ ದಿನವಾಗಿದೆ. ಯಾಕೆಂದರೆ ಈ ದಿನ ಪ್ರಪಂಚದಾದ್ಯಂತ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನ ಆಚರಿಸಲಾಗುತ್ತದೆ.

ಈ ದಿನವು ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವ ತಜ್ಞರು, ಶಿಕ್ಷಕರು, ಸಲಹೆಗಾರರು, ಸಂಸ್ಥೆಗಳು ಮತ್ತು ಸರ್ಕಾರಗಳಿಗೆ ತಾವು ಮಾಡುತ್ತಿರುವ ಕಾರ್ಯವನ್ನು ಇತರರೊಂದಿಗೆ ಹಂಚಿಕೊಳ್ಳಲು, ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಲು, ಮಾನಸಿಕ ಆರೋಗ್ಯದ ಕಾಳಜಿಗೆ ಬೇಕಾದ ಕ್ರಮಗಳ ಬಗ್ಗೆ ಚಿಂತಿಸಲು ಒಳ್ಳೆಯ ಅವಕಾಶ ಒದಗಿಸುತ್ತದೆ.




ಈ ವರ್ಷದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಮುಖ್ಯ ವಿಷಯ "Access to Service: Mental Health in Catastrophes and Emergencies" ಆಗಿದೆ. ಈ ವಿಷಯವು ಯುದ್ಧಗಳು, ಸಾಂಕ್ರಾಮಿಕ ರೋಗಗಳು ಮತ್ತು ನೈಸರ್ಗಿಕ ವಿಕೋಪಗಳಂತಹ ಬಿಕ್ಕಟ್ಟುಗಳ ಸಮಯದಲ್ಲಿ ಮಾನಸಿಕ ಆರೋಗ್ಯ ರಕ್ಷಣೆಯ ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

ಈ ರೀತಿಯ ತುರ್ತು ಪರಿಸ್ಥಿತಿಗಳು ಜನರ, ಸಮಾಜದ ಮಾನಸಿಕ ಆರೋಗ್ಯದ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ. ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಸುಮಾರು ಐದು ಜನರಲ್ಲಿ ಒಬ್ಬರು ಮಾನಸಿಕ ಆರೋಗ್ಯದ ಸಮಸ್ಯೆಯನ್ನು ಅನುಭವಿಸುತ್ತಾರೆಂದು ಅಂದಾಜಿಸಲಾಗಿದೆ. ಇಂತಹ ಅತೀ ಒತ್ತಡದ ಸಂದರ್ಭಗಳಲ್ಲಿ ಭಯ, ಆತಂಕ ಅಥವಾ ದುಃಖವನ್ನು ಅನುಭವಿಸುವುದು ಸರ್ವೇ ಸಾಮಾನ್ಯ. ಆಪತ್ತುಗಳಿಂದಾಗುವ ಮನೋವೈಜ್ಞಾನಿಕ ಪರಿಣಾಮಗಳು ಇಂತಿವೆ.

ಆಪತ್ತಿನಿಂದ ಬಹು ಮಂದಿ ಆತಂಕ, ದುಃಖ, ನಿರಾಶೆ, ನಿದ್ರಾಹೀನತೆ, ದೌರ್ಬಲ್ಯ, ಕೋಪ, ಅಥವಾ ಶಾರೀರಿಕ ನೋವುಗಳನ್ನು ಅನುಭವಿಸುತ್ತಾರೆ. ಕಾಲ ಕಳೆದಂತೆ ಈ ಸಮಸ್ಯೆಗಳು ತಗ್ಗುತ್ತವೆ, ಆದರೆ ಕೆಲವರಲ್ಲಿ ಇದರ ಪರಿಣಾಮವಾಗಿ ಗಂಭೀರ ಮಾನಸಿಕ ಅಸ್ವಸ್ಥತೆಗಳು ಕಾಣಿಸಿಕೊಳ್ಳುತ್ತವೆ.

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ ಸುಮಾರು 22% ಜನರು, ಆತಂಕ, ಖಿನ್ನತೆ, ಆಘಾತದ ನಂತರ ಒತ್ತಡದಿಂದಾಗುವ ಅಸ್ವಸ್ಥತೆ (PTSD), ಉನ್ಮಾದ ಖಿನ್ನತೆಯ ಕಾಯಿಲೆ (Bipolar Disorder) ಅಥವಾ ಸ್ಕಿಜೋಫ್ರೇನಿಯಾ ಅನುಭವಿಸಬಹುದು.

ಭಾರತ ದೇಶ ಚೀನಾ, ಪಾಕಿಸ್ತಾನ ಹಾಗು ಬಾಂಗ್ಲಾ ದೇಶದೊಂದಿಗೆ ಅನೇಕ ಬಾರಿ ಘರ್ಷಣೆಗಳನ್ನು ಎದುರಿಸುತ್ತದೆ, ಸಾಂಕ್ರಾಮಿಕ ರೋಗಗಳಿಂದಾಗಿ ನಲುಗಿದೆ ಹಾಗು ಪ್ರಕೃತಿ ವಿಕೋಪಗಳಿಂದ ಬಿಕ್ಕಟ್ಟಿನ ಸಂದರ್ಭಗಳನ್ನು ಅನುಭವಿಸಿದೆ. ಇಂಥ ತುರ್ತು ಸಂದರ್ಭಗಳಲ್ಲಿ ಲಕ್ಷಾಂತರ ಮಂದಿ ಮಾನಸಿಕ ಸಮಸ್ಯೆಗಳನ್ನು ಅನುಭವಿಸಿದ್ದಾರೆ.

ಭಾರತ ದೇಶ ಸಹ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (MoHFW), NIMHANS ಮತ್ತು ಹಲವಾರು ಎನ್‌ಜಿಓಗಳ ನೇತೃತ್ವದಲ್ಲಿ ನಡೆಸುವ ಅಭಿಯಾನಗಳ ಮೂಲಕ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಗೌರವಿಸುತ್ತದೆ.

**-ಡಾ. ಬಿ.ಎಂ. ಬಸವರಾಜ** ★

# ಹುಸಿ ನಂಬಿಕೆಗಳಿಂದ ದೂರ ಇರುವುದು ಒಳಿತು

ಶಿವಮೊಗ್ಗ: 'ಮೂಢ ನಂಬಿಕೆಗಳಿಂದಾಗಿ ತಪ್ಪು ದಾರಿಯಲ್ಲಿ ಹೋಗುತ್ತಿದ್ದೇವೆ. ಆದ್ದರಿಂದ, ಹುಸಿ ನಂಬಿಕೆಗಳಿಂದ ದೂರ ಇರಬೇಕು. ವಿಜ್ಞಾನ ಯಾವುದನ್ನೂ ಸುಲಭವಾಗಿ ನಂಬುವುದಿಲ್ಲ' ಎಂದು ಹಿರಿಯ ಮನೋವಿಜ್ಞಾನಿ ಡಾ. ಸಿ.ಆರ್. ಚಂದ್ರಶೇಖರ್ ಅವರು ಹೇಳಿದರು.

ಇಲ್ಲಿನ ಬಿ.ಎಚ್. ರಸ್ತೆಯ ಕರ್ನಾಟಕ ಸಂಘದಲ್ಲಿ ಭಾನುವಾರ ಆಯೋಜಿಸಿದ್ದ 'ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ. ಶಿವರಾಮ ಕಾರಂತ ವಿಜ್ಞಾನ



ಸಾಹಿತ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ನಮ್ಮ ನಡುವೆ ನೂರೆಂಟು ಮೂಢನಂಬಿಕೆಗಳು ನಂಬಿಕೆಗಳು ಇವೆ. ಹುಸಿ ನಂಬಿಕೆಗಳ ಭಾರ ಹೊತ್ತು ನಡೆಯಬಾರದು. ಅಂತೆ ಕಂತೆಗಳನ್ನು ನಂಬಿ ಬದುಕುವುದನ್ನು ನಿಲ್ಲಿಸಬೇಕು. ಕಾರಂತರ ಹೆಸರಲ್ಲಿ ಪ್ರಶಸ್ತಿ ಸ್ವೀಕರಿಸಿದ್ದಕ್ಕೆ ಸಂಘಕ್ಕೆ ಋಣಿಯಾಗಿದ್ದೇನೆ. ಇದೊಂದು ಅಪೂರ್ವ ವೇದಿಕೆ ಎಂದರು.

ಹಿರಿಯ ಸಂಶೋಧಕಿ ಟಿ.ಎನ್. ನಾಗರತ್ನ, ಶಂಭಾ ಜೋಶಿ ಸಂಶೋಧನಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಸಂಶೋಧಕ ಪ್ರೊ. ಎನ್.ಎಂ. ತಳವಾರ್ ಹಾಗೂ ವೈದ್ಯೆ ಡಾ. ಕೆ.ಎಸ್. ಪವಿತ್ರ ಅವರು ಪ್ರಶಸ್ತಿ ಪುರಸ್ಕೃತರ ಕುರಿತ ಅಭಿನಂದನಾ ನುಡಿಗಳನ್ನಾಡಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಎಚ್. ಆರ್. ಶಂಕರನಾರಾಯಣ ಶಾಸ್ತ್ರಿ, ಸಂಘದ ಕಾರ್ಯದರ್ಶಿ ವಿನಯ್ ಶಿವಮೊಗ್ಗ, ಸಂಘದ ಮಾಜಿ ಅಧ್ಯಕ್ಷ ಎಂ.ಎನ್. ಸುಂದರರಾಜ್, ಪ್ರೊ. ಆಶಾಲತಾ ಇದ್ದರು.

**ಕಾರ್ಲ್ ಮೆನಿಂಜರ್**

ಅಮೆರಿಕೆಯ ಪ್ರಖ್ಯಾತ ಮನೋವೈದ್ಯ, ಲೇಖಕ, ಹೋರಾಟಗಾರ.

The Human mind, Love against hate CRIME OF PUNISHMENT. He said: ``Love Cures People, Both the ones who Give it and who Receive it''.

"ಕೊಟ್ಟವರನ್ನು, ಪಡೆದವರನ್ನು ಪ್ರೀತಿ ಗುಣಪಡಿಸುತ್ತದೆ"

Love increase Oxytocin and Dopamine – wellness hormones.

(ಸಂಗ್ರಹ – ಡಾ. ಸಿ.ಆರ್. ಚಂದ್ರಶೇಖರ್)

# ನಮ್ಮ ನಿಮ್ಮ ಅಸಹಜ ನಡವಳಿಕೆಗಳಿಗೆ ಪರಿಹಾರವೇನು?

ಲೇ: ಡಾ. ಸಿ.ಆರ್. ಚಂದ್ರಶೇಖರ್, ಪ್ರಕಾಶಕರು: ವಿಶ್ವಸ್ಥ ಮಂಡಲಿ, ಸಮಾಧಾನ ಆಪ್ತಸಲಹಾ ಕೇಂದ್ರ, ಬೆಂಗಳೂರು, ಪುಟಗಳು: 90, ಬೆಲೆ: ರೂ. 100

"ಯಾವುದೇ ವ್ಯಕ್ತಿಯ ನಡೆವಳಿಕೆಯನ್ನು ಅರ್ಥ ಮಾಡಿಕೊಳ್ಳುವುದು, ಅದನ್ನು ಮೊದಲೇ ಊಹಿಸುವುದು ಕಷ್ಟದ ಕೆಲಸ. ಈಗಾಗಲೇ ಅಭ್ಯಾಸವಾಗಿ ಬಿಟ್ಟಿರುವ ನಡವಳಿಕೆಯನ್ನು ಬದಲಿಸುವುದು ಇನ್ನೂ ಕಷ್ಟದ ಕೆಲಸ. ಒಂದೇ ಪ್ರಚೋದನೆ, ಒಂದೇ ಸನ್ನಿವೇಶ, ಆದರೆ ವ್ಯಕ್ತಿಗಳ ನಡೆವಳಿಕೆ ಭಿನ್ನವಾಗಿರುತ್ತವೆ. ಸನ್ನಿವೇಶ, ಪ್ರಚೋದನೆ ಒಂದೇ. ಆದರೆ ವ್ಯಕ್ತಿಯ ನಡವಳಿಕೆಯು ನಿನ್ನೆ, ಇಂದು ಮತ್ತು ನಾಳೆ ಒಂದೇ ಆಗಿರುವುದಿಲ್ಲ" (ಲೇಖಕರ ನುಡಿಯಿಂದ).

ನಮ್ಮ ಮಾತು, ವರ್ತನೆ–ಕ್ರಿಯೆ ಪ್ರತಿಕ್ರಿಯೆಗಳು ವಿಪರೀತ ಅಸಹಜವಾದರೆ ಮಾನಸಿಕ ಕಾಯಿಲೆ ಎನಿಸಿಕೊಳ್ಳುತ್ತದೆ. ಆ ಮಟ್ಟದ ವ್ಯತ್ಯಾಸಕ್ಕೆ ಕಾರಣ ಏನು? ಇವುಗಳಿಗೆಲ್ಲ ಈ ಪುಸ್ತಕದಲ್ಲಿ ಉತ್ತರಗಳು ದೊರೆಯುತ್ತವೆ.

ಮೂರು ಭಾಗಗಳಲ್ಲಿ ನಡೆವಳಿಕೆಗಳನ್ನು, ಮನೋರೋಗಗಳ ವೈವಿಧ್ಯವನ್ನೂ ವಿವರಿಸಲಾಗಿದೆ. ಆತಂಕ ಮನೋರೋಗ, ಖಿನ್ನತೆ, ಗೀಳು ಮನೋರೋಗ, ಆಘಾತದಿಂದ ಮನೋರೋಗ, ಸೊಮಾಟೊಫಾರ್ಮ್ ಡಿಸಾರ್ಡರ್ಸ್, ನಿದ್ರಾ ತೊಂದರೆಗಳು, ಲೈಂಗಿಕ ತೊಂದರೆಗಳು, ಸ್ಕಿಜೋಫ್ರೀನಿಯಾ, ಅಲ್ಪಕಾಲದ ಚಿತ್ತವಿಕಲತೆ, ಡಿಮೆನ್ಷಿಯ, ಮಕ್ಕಳಲ್ಲಿ ಭಾವನಾತ್ಮಕ ಮನೋರೋಗಗಳು, ಬುದ್ಧಿಮಾಂದ್ಯತೆ, ಮಾನಸಿಕ ಆರೋಗ್ಯ ಎಂದರೇನು? ಈ ಎಲ್ಲ ವಿಷಯಗಳ ಬಗ್ಗೆ ಸೋದಾಹರಣೆಗಳ ಮೂಲಕ ವಿವರಣೆ ಈ ಕೃತಿಯಲ್ಲಿದೆ.

ಕರ್ನಾಟಕ ಆಪ್ತಸಮಾಲೋಚಕರ ವೇದಿಕೆಯಿಂದ ಸಿರಿಶಂಕರಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕಿನ ವತಿಯಿಂದ ಮಹಿಳೆಯರು ಹಾಗೂ ಮಕ್ಕಳಿಗಾಗಿ ಮಾನಸಿಕ ಆರೋಗ್ಯ ಶುಚಿತ್ವದ ಬಗ್ಗೆ ಅರಿವು ಮೂಡಿಸಲಾಯಿತು.

ಮಕ್ಕಳಿಗೆ ಅಧ್ಯಯನ ಕೌಶಲ್ಯ, ಖಜಿಜ ಖಇುಟಟಫ ಹಾಗೂ



ಮಾನಸಿಕವಾಗಿ ಹೇಗೆ ದೃಢವಾಗಿರಬೇಕೆಂದು ತಿಳಿಸಿಕೊಡಲಾಯಿತು. ಶ್ರೀಮತಿ ರಾಜೇಶ್ವರಿ ರಮೇಶ್ ಹಾಗೂ ಭರಣೀಗೌಡರವರು ವೇದಿಕೆಯಿಂದ ಮಹಿಳೆಯರು ಹಾಗೂ ಮಕ್ಕಳಿಗೆ ಅರಿವು ಮೂಡಿಸಿದರು.

# ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ

ಬೆಂಗಳೂರಿನ ಅರಕೆರೆ ಮೈಕೊ ಲೇಔಟ್‌ನಲ್ಲಿರುವ ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ ಈ ಸಂಸ್ಥೆಯ ಸ್ಥಾಪಕರಲ್ಲೊಬ್ಬರಾದ ಡಾ. ಸಿ. ಆರ್. ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಕಳೆದ 15 ವರ್ಷಗಳಿಂದ ಸೇವೆ ಒದಗಿಸುತ್ತಿದೆ. ಕರ್ನಾಟಕ ಸಹಕಾರ ಸಂಘಗಳ ನೋಂದಣಿ ಕಾಯಿದೆ, 1960ರ ಪ್ರಕಾರ ನೋಂದಾಯಿತ ಸಂಸ್ಥೆ ಇದಾಗಿದ್ದು, ಆಪ್ತ ಸಲಹೆ ಮತ್ತು ಸಮಾಲೋಚನೆಯನ್ನು ಜನಪ್ರಿಯಗೊಳಿಸುವುದು, ಆಪ್ತ ಸಮಾಲೋಚಕರ ನಾನಾ ಕೌಶಲಗಳನ್ನು ಗುರುತಿಸಿ ಅಭಿವೃದ್ಧಿಪಡಿಸಿ ಅವರು ಪರಸ್ಪರ ಸಹಕರಿಸುವಂತೆ ಪ್ರೇರೇಪಿಸುವುದು, ಹೊಸ ಹೊಸ ಸಮಾಲೋಚನಾ ತಂತ್ರಗಳನ್ನು ಆವಿಷ್ಕರಿಸುವುದು, ಬಳಸುವುದು ಈ ಸಂಸ್ಥೆಯ ಉದ್ದೇಶವಾಗಿದೆ.

ಆರೋಗ್ಯ, ಕೌಟುಂಬಿಕ, ದಾಂಪತ್ಯ ಅಥವಾ ವೈಯಕ್ತಿಕ ಸಮಸ್ಯೆ ಇದ್ದಾಗ ಆಪ್ತಸಲಹೆ ಏಕೆ ಪಡೆಯಬೇಕೆಂಬ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು; ರಾಜ್ಯದ ವಿವಿಧೆಡೆಗಳಲ್ಲಿ ಆಪ್ತ ಸಲಹೆಯ



ಸೇವಾ ಕೇಂದ್ರಗಳನ್ನು ಆರಂಭಿಸುವುದು; ಶಾಲಾ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಆರೋಗ್ಯ, ಮಾನಸಿಕ ಆರೋಗ್ಯ, ಜನಾರೋಗ್ಯದ ಬಗ್ಗೆ ಮಾಹಿತಿ, ಶಿಕ್ಷಣ, ಸಂವಹನ ನೀಡುವುದು.

ಪ್ರತಿ ವರ್ಷ ಸೆಪ್ಟೆಂಬರ್ 1 ರಂದು ವಿಶ್ವಾದ್ಯಂತ ಆಚರಿಸಲಾಗುವ 'ವಿಶ್ವ ಆತ್ಮಹತ್ಯಾ ನಿವಾರಣಾ ದಿನ'ವನ್ನು ಮತ್ತು ಅಕ್ಟೋಬರ್ ತಿಂಗಳಿನಲ್ಲಿ 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ'ಯನ್ನು ವೇದಿಕೆಯು ತಪ್ಪದೆ ಆಚರಿಸುತ್ತದೆ.

ಶಾಲಾ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಮಾನಸಿಕ ಆರೋಗ್ಯ, ಜನಾರೋಗ್ಯದ ಬಗ್ಗೆ ಮಾಹಿತಿ, ಶಿಕ್ಷಣ, ಸಂವಹನ ನೀಡುವ ಉದ್ದೇಶದಿಂದ ವೇದಿಕೆಯು ಕರ್ನಾಟಕದ ವಿವಿಧ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲೆ, ಕಾಲೇಜುಗಳಿಗೆ ಭೇಟಿ ಕೊಟ್ಟು, ವೇದಿಕೆಯ ಸದಸ್ಯರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರಿಂದ ವಿದ್ಯಾರ್ಥಿಗಳಿಗೆ ಉಪನ್ಯಾಸ, ಪರಿಹಾರ, ಅಧ್ಯಯನಕ್ಕೆ ಅಗತ್ಯವಾದ ಸಲಹೆ, ಸೂಚನೆಗಳು, ನೆನಪಿನ ಶಕ್ತಿಯ ವರ್ಧನೆ, ಆತಂಕ ನಿವಾರಣೆ, ಪರೀಕ್ಷೆಗಳನ್ನು ಎದುರಿಸುವುದು ಹೇಗೆ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿ ಪರಿಹಾರಗಳನ್ನು ಸೂಚಿಸುತ್ತದೆ.

ಹಲವಾರು ವರ್ಷಗಳಿಂದ ಸತತವಾಗಿ ಕೌನ್ಸೆಲಿಂಗ್ ಸೇವೆ ಒದಗಿಸುತ್ತಿರುವ ಸಂಘ ಸಂಸ್ಥೆಗಳು, ವ್ಯಕ್ತಿಗಳನ್ನು ಗುರುತಿಸಿ ಅವರನ್ನು ಸನ್ಮಾನಿಸುವ ಕೆಲಸವನ್ನು ಸಹಾ ವೇದಿಕೆ ಪ್ರತಿ ವರ್ಷ ಮಾಡುತ್ತಿದೆ. ಅಲ್ಲದೆ, ನಿಮ್ಹಾನ್ಸ್ ಸಂಸ್ಥೆಯೊಡನೆ ನಿಕಟ ಸಂಪರ್ಕ ಹೊಂದಿದ್ದು, ಅಲ್ಲಿನ ತಜ್ಞರ ಸೇವೆಯನ್ನು ಸಹಾ ಅಗತ್ಯವಾದಾಗ ಉಪಯೋಗಿಸಿಕೊಳ್ಳಲಾಗುತ್ತಿದೆ.

**ವೇದಿಕೆಯ ಸದಸ್ಯತ್ವದ ಶುಲ್ಕ ಈ ಕೆಳಕಂಡಂತೆ ಇದೆ:**

1. ಮಹಾಪೋಷಕರು ರೂ. 5,000
2. ಪೋಷಕರು ರೂ. 2,000
3. ಅಜೀವ ಸದಸ್ಯರು ರೂ. 1,000

ವೇದಿಕೆಯ ಉದ್ದೇಶಗಳನ್ನು ಅಂಗೀಕರಿಸಿ ಆದರೊಡನೆ ಸಹಕರಿಸಲು ಬದ್ಧರಾಗುವ 18 ವರ್ಷಕ್ಕೆ ಮೇಲ್ಪಟ್ಟವರು ಹಾಗೂ ಯಾವುದಾದರೂ ಆಪ್ತಸಲಹಾ ಸಂಸ್ಥೆಯಿಂದ ತರಬೇತಿ ಪಡೆದಿರುವವರು ಸದಸ್ಯರಾಗಲು ಅರ್ಹರಾಗಿರುತ್ತಾರೆ.

**ಆನ್‌ಲೈನ್ ಉಪನ್ಯಾಸಗಳು**

ಪ್ರತಿ ತಿಂಗಳು ತಜ್ಞ ವೈದ್ಯರು, ಮನೋವೈದ್ಯರು, ಸಮಾಲೋಚಕರು, ಲೇಖಕರುಗಳಿಂದ ಮನೋವೈದ್ಯಕ್ಕೆ ಸಂಬಂಧಿಸಿದಂತೆ ಉಪನ್ಯಾಸಗಳನ್ನು ಏರ್ಪಡಿಸುತ್ತದೆ. 2023–24ನೇ ಇಸವಿಯಲ್ಲಿ ಸುಮಾರು 40 ಉಪನ್ಯಾಸಗಳನ್ನು ಏರ್ಪಡಿಸಿತ್ತು. ಕೋವಿಡ್ ನಂತರದ ದಿನಗಳಲ್ಲಿ ಈ ಉಪನ್ಯಾಸಗಳು ಆನ್‌ಲೈನ್‌ನಲ್ಲಿ ನಡೆಯುತ್ತಿವೆ.

**ಮಕ್ಕಳ ಮಾರ್ಗದರ್ಶನ ಕೇಂದ್ರ**

ಈ ಕೇಂದ್ರದಲ್ಲಿ ಮಗುವಿನ ಬೆಳವಣಿಗೆ, ಕಲಿಕಾ ಸಮಸ್ಯೆಗಳು, ಎಡಿಎಚ್‌ಡಿ, ಆಟಿಸಂ, ಭಾವನಾತ್ಮಕ ಸಮಸ್ಯೆಗಳು, ನಡತೆಯ ಸಮಸ್ಯೆಗಳು, ಸಾಮಾಜಿಕ ಮತ್ತು ಮಾನಸಿಕ ಅಥವಾ ಭಾವನಾತ್ಮಕ ಅಂಶಗಳನ್ನು ದೈಹಿಕ ಲಕ್ಷಣಗಳಾಗಿ ವ್ಯಕ್ತಪಡಿಸುವ (ಸೊಮಾಟೈಸೇಷನ್); ಹದಿಹರೆಯದವರ ಸಮಸ್ಯೆಗಳು; ದುಶ್ಚಟಗಳು; ಪೋಷಕರ ಕರ್ತವ್ಯಗಳು; ಜೀವನ ಕೌಶಲ್ಯಗಳು; ಮಕ್ಕಳ ಆಪ್ತಸಲಹೆ, ಮಾನವರ ಅಗತ್ಯಗಳು ಮತ್ತು ಮೌಲ್ಯಗಳು; ಅಧ್ಯಯನ ಕೌಶಲ್ಯಗಳು/ಕಲಿಕೆಯ ವಿಧಾನಗಳು, ಕ್ರೀಡೆಗಳ ಮಹತ್ವ: ಪ್ರಮುಖ ಮಾನಸಿಕ ಸಮಸ್ಯೆಗಳು, ಪೋಷಕರ ಸಮಸ್ಯೆಗಳು; ರಸಪ್ರಶ್ನೆ ಈ ವಿಷಯಗಳ ಬಗ್ಗೆ ತಜ್ಞರಿಂದ ತರಬೇತಿ ಕೊಡಲಾಗುತ್ತದೆ.

**ಸ್ಟಡಿ ಸರ್ಕಲ್**

ಪ್ರತಿ ತಿಂಗಳ ಮೊದಲನೇ ಮಂಗಳವಾರದಂದು ಆಪ್ತಸಮಾಲೋಚಕರಿಗಾಗಿ ಸ್ಟಡಿ ಸರ್ಕಲ್ ಸಭೆಯನ್ನು ಏರ್ಪಡಿಸಲಾಗುತ್ತದೆ. ಇದರಲ್ಲಿ ಆಪ್ತಸಮಾಲೋಚಕರು ಭಾಗವಹಿಸಿ, ಹಲವಾರು ವಿಷಯಗಳನ್ನು ಚರ್ಚಿಸುತ್ತಾರೆ.

**"ಸಮಾಲೋಚನೆ" ತ್ರೈಮಾಸಿಕ ಪತ್ರಿಕೆ**

ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆಯ ಮುಖವಾಣಿಯಾದ ಈ ಪತ್ರಿಕೆ ವೇದಿಕೆಯ ಎಲ್ಲ ಚಟುವಟಿಕೆಗಳ ಸಚಿತ್ರ ವರದಿಯನ್ನು ನಿಯಮಿತವಾಗಿ ಪ್ರಕಟಿಸುತ್ತದೆ. ಉಪಯುಕ್ತವಾದ ಮಾಹಿತಿ ನೀಡುತ್ತದೆ. ಈ ಪತ್ರಿಕೆಯನ್ನು ಇಲ್ಲಿ ತರಬೇತಿ ಪಡೆಯುವ ಎಲ್ಲರಿಗೂ ಒದಗಿಸಲಾಗುತ್ತದೆ. ಇವರಲ್ಲಿ ಕೇಸ್ ಸ್ಟಡಿಗಳು, ವರದಿಗಳು, ಲೇಖನಗಳು ಮುಂತಾದುವೆಲ್ಲ ಪ್ರಕಟಿಸಲಾಗುತ್ತದೆ.

ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆಯಲ್ಲಿ ಈಗ ಒಟ್ಟು 383 ಜನ ಆಜೀವ ಸದಸ್ಯರಿದ್ದಾರೆ.

ಹೀಗೆ ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆ ಜನಸಾಮಾನ್ಯರಿಗೆ ಆಪ್ತಸಮಾಲೋಚನೆಯ ಅಗತ್ಯತೆಯ ಬಗ್ಗೆ ತಿಳುವಳಿಕೆ ಮೂಡಿಸುವುದರ ಜೊತೆಗೆ ಅಗತ್ಯವಿದ್ದವರಿಗೆ ಸೂಕ್ತ ಸಲಹೆ ಸಮಾಧಾನಗಳನ್ನು ಒದಗಿಸುತ್ತಾ ಸಮಾಜ ಸೇವೆಯಲ್ಲಿ ನಿರತವಾಗಿದೆ.

**ವೇದಿಕೆಯ ಸರ್ವ ಸದಸ್ಯರ ಸಭೆ**

ದಿನಾಂಕ: 2–9–2025ರಂದು ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆಯ ವಾರ್ಷಿಕ ಸರ್ವಸದಸ್ಯರ ಸಭೆ ಸಮಾಧಾನ ಆಪ್ತ ಸಮಾಲೋಚನ ಕೇಂದ್ರ, ಬನ್ನೇರುಘಟ್ಟ ರಸ್ತೆ,

ಬೆಂಗಳೂರು ಇಲ್ಲಿ ನಡೆಯಿತು. ಕಾರ್ಯದರ್ಶಿ ಡಾ. ಬಿ.ಎಂ. ಬಸವರಾಜ ಅವರು ವೇದಿಕೆಯ ಚಟುವಟಿಕೆಗಳ ವಿವರಗಳನ್ನು ನೀಡಿದರು. ಖಜಾಂಚಿ ಶ್ರೀಮತಿ ಬಿ.ಜಿ. ಗಾಯತ್ರಿಯವರು ವೇದಿಕೆಯ ಆಯ–ವ್ಯಯ ವಿವರಗಳನ್ನು ಪ್ರಕಟಿಸಿದರು. ಶ್ರೀಮತಿ ರಾಜೇಶ್ವರಿಯವರು ಹೊಸ ಸದಸ್ಯರುಗಳ ಪರಿಚಯ ಮಾಡಿಕೊಟ್ಟರು. ಶ್ರೀಮತಿ ಲಕ್ಷ್ಮೀರಾವ್ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ವೇದಿಕೆಯ ಗೌರವಾನ್ವಿತ ಮಾರ್ಗದರ್ಶಿಗಳಾದ ಪದ್ಮಶ್ರೀ ಡಾ. ಸಿ.ಆರ್. ಚಂದ್ರಶೇಖರ್ ಅವರು ಸಭಿಕರನ್ನು ಉದ್ದೇಶಿಸಿ ಮಾತನಾಡಿ, ಮಾನಸಿಕ ಆರೋಗ್ಯದ ಮಹತ್ವದ ಬಗ್ಗೆ ತಿಳುವಳಿಕೆ ನೀಡಿದರು. ಸೆಪ್ಟೆಂಬರ್ 10, 2025 "ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ದಿನ"ವಾಗಿ ವಿಶ್ವಾದ್ಯಂತ ಆಚರಿಸಲಾಗುತ್ತದೆ ಎಂದು ತಿಳಿಸಿದರು. ಇದೇ ವೇದಿಕೆಯಲ್ಲಿ ವೇದಿಕೆಯ ಉಪಾಧ್ಯಕ್ಷ ಡಾ. ಎನ್. ಗೋಪಾಲಕೃಷ್ಣ ಅವರು ರಚಿಸಿದ "Suicide" ಇಂಗ್ಲಿಷ್ ಕೃತಿಯನ್ನು ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ವೇದಿಕೆ ಪ್ರಾರಂಭವಾದಾಗಿನಿಂದಲೂ ಖಜಾಂಚಿಯಾಗಿ ತುಂಬ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರುವ




ಶ್ರೀಮತಿ ಬಿ. ಜಿ. ಗಾಯತ್ರಿಯವರು ಖಜಾಂಚಿ ಸ್ಥಾನಕ್ಕೆ ರಾಜೀನಾಮೆ ನೀಡುವ ಇಚ್ಛೆ ವ್ಯಕ್ತಪಡಿಸಿದರು. ಸುದೀರ್ಘ ಸೇವೆಯ ಮೂಲಕ ತಾವು ವೇದಿಕೆಯ ಪುರೋಭಿವೃದ್ಧಿಗೆ ಅವಿರತವಾಗಿ ಶ್ರಮಿಸಿ, ಇದೀಗ ರಾಜೀನಾಮೆ ಕೊಡುತ್ತಿರುವುದಾಗಿ ಶ್ರೀಮತಿ ಗಾಯತ್ರಿಯವರು ತಿಳಿಸಿದರು. ಅವರ ಸುದೀರ್ಘ ಸೇವೆಯನ್ನು ಪ್ರಶಂಸಿಸಿ ಡಾ. ಸಿ. ಆರ್. ಚಂದ್ರಶೇಖರ್ ಆದಿಯಾಗಿ ಎಲ್ಲ ಪದಾಧಿಕಾರಿಗಳು, ಸದಸ್ಯರೂ ಅವರನ್ನು ಅಭಿನಂದಿಸಿ, ಸನ್ಮಾನಿಸಿದರು. ★

## ಉತ್ತಮ ಜೀವನಕ್ಕಾಗಿ ಲೈಂಗಿಕ ಆರೋಗ್ಯ ಮಾರ್ಗದರ್ಶಿ

ಲೇ: ಶ್ರೀ ಎನ್. ವಿಶ್ವರೂಪಾಚಾರ್, ಪ್ರಕಾಶಕರು: ಇಂಟರ್‌ನ್ಯಾಷನಲ್ ಮೆಂಟಲ್ ಹೆಲ್ತ್ ಫೋರಂ ಟ್ರಸ್ಟ್ (ರಿ.), ಬೆಂಗಳೂರು

2019ರಲ್ಲಿ ಪ್ರಥಮ ಮುದ್ರಣ ಕಂಡ ಈ ಕೃತಿ Sexual Health Guide ಎಂದು ಪ್ರಸಿದ್ಧವಾಗಿದೆ. 250 ಪುಟಗಳ ಈ ಕೃತಿಯಲ್ಲಿ ಲೇಖಕರು 50 ಅಧ್ಯಾಯಗಳಲ್ಲಿ ಲೈಂಗಿಕ ಆರೋಗ್ಯ, ಶರೀರ ಭಾವನೆ, ವ್ಯಾಯಾಮ ಕಾಮೋತ್ತೇಜಕವೇ? ದಂಪತಿಗಳಲ್ಲಿ ಲೈಂಗಿಕ ವಿಶ್ವಾಸ, ಪ್ರೀತಿ ಇಲ್ಲದ ಲೈಂಗಿಕತೆ ತೃಪ್ತಿ ನೀಡುವುದೇ?; ಪ್ರೀತಿ ಎಂದರೇನು?, ಯೋನಿಯ ಆರೈಕೆ, ಆರೋಗ್ಯ, ಸ್ತ್ರೀ ಮತ್ತು ಶುಚಿತ್ವ, ಮದ್ಯಪಾನ ಮತ್ತು ಲೈಂಗಿಕತೆ, ಮಾನಸಿಕ ಆರೋಗ್ಯ ಮತ್ತು ಪ್ರೀತಿ, ಮುಟ್ಟು ಮೈಲಿಗೆಯಲ್ಲ, ಪುರುಷ ಮುಷ್ಟಿ ಮೈಥುನ, ಲೈಂಗಿಕತೆ ಮತ್ತು ಮಧುಮೇಹ, ಪ್ರಾಸ್ಟೇಟ್, ಗುಂಡಿಗೆ ಬೇನೆ ಮತ್ತು ಲೈಂಗಿಕತೆ, ಸುನ್ನತಿ ಎಂದರೇನು? ಲೈಂಗಿಕ ಆರೋಗ್ಯ ಹೇಗೆ?; ಪದೇ ಪದೇ ಏಕೆ ಗರ್ಭಪಾತ?; ಜನನಾಂಗ ಆರೋಗ್ಯ ಸೂತ್ರಗಳು, ಲೈಂಗಿಕತೆ ಮತ್ತು ವ್ಯಾಯಾಮ, ರತಿಯಲ್ಲಿ ಭಾವಪ್ರಾಪ್ತಿ, ರತಿ ರೋಗಗಳು; ಯೋಗ ಮತ್ತು ಲೈಂಗಿಕತೆ; ಕಾಮವಿಕಾರಗಳು; ಮುಟ್ಟು ನಿಂತ ನಂತರ ಲೈಂಗಿಕತೆ, ಅಲ್ಲದೆ ಲೈಂಗಿಕ ವಿಜ್ಞಾನ ನಿಘಂಟು ಅಧ್ಯಾಯದಲ್ಲಿ ನೂರಾರು ಇಂಗ್ಲಿಷ್ ಪದಗಳಿಗೆ ಸೂಕ್ತವಾದ ಕನ್ನಡ ಶಬ್ದಗಳನ್ನು ಲೇಖಕರು ಪರಿಚಯಿಸಿದ್ದಾರೆ.





ಉದಾಹರಣೆಗೆ: Androgen – ಗಂಡು ಜನಕ, Artificial insemination – ಕೃತಕ ಗರ್ಭಧಾರಣೆ, Aphrodisiac – ಕಾಮೋತ್ತೇಜಕ, Beat off – ಪುರುಷರಲ್ಲಿ ಹಸ್ತಮೈಥುನ, Bisexual – ಉಭಯಲಿಂಗಿ, Celibacy – ಲೈಂಗಿಕ ಬ್ರಹ್ಮಚರ್ಯ, Circumcision – ಸುನ್ನತಿ, Dildo – ನಕಲಿ ಶಿಷ್ನ, Ejaculation – ಸ್ಖಲನ, Erection – ಉದ್ರೇಕ, False pregnancy – ಮಿಥ್ಯಾಗರ್ಭ, Foetus – ಪಿಂಡಗೂಸು, Menopause – ಋತುಬಂಧ, Obscenity – ಅಶ್ಲೀಲತೆ, Ovum – ಅಂಡಾಣು, Promiscuity – ಸ್ವೇಚ್ಛಾಚಾರ, Sadism – ಹಿಂಸಾರತಿ – ಹೀಗೆ ಅಧ್ಯಯನ ಯೋಗ್ಯ ಕೃತಿ ಇದಾಗಿದೆ. ★

# ಹೊಸ / ಮರುಮುದ್ರಿತ ಪುಸ್ತಕಗಳು

**THE MIND MANAGEMENT GUIDE**

ಲೇ: ಶ್ರೀ ಎನ್. ವಿಶ್ವರೂಪಾಚಾರ್ ಮತ್ತು ಡಾ. ಎನ್. ಗೋಪಾಲಕೃಷ್ಣ. ಪ್ರಕಾಶಕರು: ಇಂಟರ್‌ನ್ಯಾಷನಲ್ ಮೆಂಟಲ್ ಹೆಲ್ತ್ ಫೋರಂ ಟ್ರಸ್ಟ್ (ರಿ.), ಬೆಂಗಳೂರು

ಈ ಹಿಂದೆ 2019ರಲ್ಲಿ ಪ್ರಕಟವಾಗಿದ್ದ ಈ ಕೃತಿ ಜನಪ್ರಿಯವಾಗಿದ್ದು ಹಲವು ಮುದ್ರಣಗಳನ್ನು ಕಂಡಿದೆ. ಇದೀಗ 2024ರಲ್ಲಿ ಇತ್ತೀಚೆಗೆ ಪುನಃ ಮುದ್ರಣವಾಗಿ ಓದುಗರ ಕೈ ಸೇರಿದೆ. ಈ ಕೃತಿಯಲ್ಲಿ 16 ಅಧ್ಯಾಯಗಳಿದ್ದು, 1) Prinicples of mental health 2) Managing your mind 3) The power of mind 4) What is realiation? 5) Techniques for reducing tension 6) Persuade yourself 7) Creativity 8) Loneliness & self-management 9) What to do for self-esteem 10) How to do away with anxiety 11) Necessity of good habits 12) Spiritual Health 13) The healing power of crying 14) Get rid of depression 15) Reasons for fatigue 16) 25 suggestions for Mental Health tips. ★



# ಸ್ಕಿಜೋಫ್ರೀನಿಯಾ ಮತ್ತು ಕುಟುಂಬ ಸಮಾಲೋಚನೆ

ಸುರೇಶಚಂದ್ರ (ಹೆಸರು ಬದಲಾಯಿಸಿದೆ) 33 ವರ್ಷದ ಸ್ಫುರದ್ರೂಪಿ ಯುವಕ, ಎಂ.ಟೆಕ್. ಓದಿ ಒಳ್ಳೆಯ ಎಂಎನ್ಸಿ ಕಂಪೆನಿಯಲ್ಲಿ ಒಂದೂವರೆ ಲಕ್ಷ ರೂ. ಮಾಸಿಕ ಸಂಬಳ, ತಂದೆ ಕಾರ್ಖಾನೆ ಒಂದರ ನಿವೃತ್ತ ಅಧಿಕಾರಿ, ತಾಯಿ ಹೋಂ ಮೇಕರ್. ಒಬ್ಬಳೇ ತಂಗಿ ಆಕೆ ಸಹಾ ಲಕ್ಷ ರೂ. ಸಂಬಳ ತರುವ ಸಾಫ್ಟ್‌ವೇರ್ ಉದ್ಯೋಗಿ. ಸ್ವಂತ ಮನೆ, ತಾಯಿಗೆ ಅವರ ತಂದೆಯ ಮನೆ ಕಡೆಯಿಂದ ಸಾಕಷ್ಟು ಆಸ್ತಿ ಬಂದಿದೆ. ಎಲ್ಲ ಚೆನ್ನಾಗಿದ್ದು, "ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ" ಎಂಬಂತೆ ಇವರ ಜೀವನ.



ಇಲ್ಲಿಯವರೆಗೂ ಎಲ್ಲ ಚೆನ್ನಾಗಿದ್ದ ಈ ಯುವಕ ಕಳೆದ 2 ತಿಂಗಳಿಂದ ಕುಟುಂಬಕ್ಕೆ ತಲೆನೋವಾಗಿದ್ದಾನೆ. ಹೇಗೆಂದರೆ ತಂದೆ ತಾಯಿಯರನ್ನು ಈತ ಒಂದೇ ಸಮ ಪೀಡಿಸುತ್ತಿದ್ದಾನೆ. ಅವನ ಪ್ರಕಾರ ಆತನ ತಂಗಿ ಒಬ್ಬ ಹುಡುಗನ ಜೊತೆ ಓಡಾಡುತ್ತಿದ್ದಾಳೆ. ಆ ಹುಡುಗನಿಗೆ ಸರಿಯಾದ ಕೆಲಸವಿಲ್ಲ. ತನ್ನ ಮನೆಯ ಆಸ್ತಿ ನೋಡಿ, ಇವನ ತಂಗಿ ಸುಧಾ (ಹೆಸರು ಬದಲಾಯಿಸಿದೆ) ಳನ್ನು ಯಾಮಾರಿಸಿ ಮದುವೆ ಮಾಡಿಕೊಳ್ಳಲು ಹವಣಿಸುತ್ತಿದ್ದಾನೆ. ಆದ್ದರಿಂದ ಸುಧಾ ಅವನಿಂದ ದೂರ ಇರುವಂತೆ ಮಾಡಿ ಎಂದು ತನ್ನ ತಾಯಿ ತಂದೆಯರನ್ನು ಒತ್ತಾಯಿಸುತ್ತಿದ್ದಾನೆ. ಆದರೆ, ಆ ಹುಡುಗ ಇವರ ಮನೆಯವರಿಗೆಲ್ಲ ಗೊತ್ತಿರುವ, ಒಳ್ಳೆಯ ಹುಡುಗನೇ ಆಗಿದ್ದಾನೆಂದು ಆನಂತರ ತಿಳಿಯಿತು.

ಸುರೇಶಚಂದ್ರನ ಎರಡನೆಯ ಸಮಸ್ಯೆ ಎಂದರೆ ಕಳೆದ ಎರಡು ತಿಂಗಳಿನಿಂದ ಇವನ ವರ್ತನೆ ತುಂಬಾ ಬದಲಾಗಿದೆ. ಕಚೇರಿಯಲ್ಲಿ ಸಹಾ ಇವನ ವರ್ತನೆಯನ್ನು ಗಮನಿಸಿದ್ದಾರೆ.

• ಈತ ತನ್ನ ಕೆಲಸವನ್ನೇನೋ ಅಚ್ಚುಕಟ್ಟಾಗಿ ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸುತ್ತಾನಂತೆ. ಆದರೆ, ಅಮೇಲೆ ಈತ ಯಾರೊಡನೆಯೂ ಮಾತನಾಡುವುದಾಗಲಿ, ಬೆರೆಯುವುದಾಗಲಿ ಇಲ್ಲದೆ, ಸಾಮಾಜಿಕವಾಗಿ ಎಲ್ಲರಿಂದ ದೂರವೇ ಉಳಿಯುತ್ತಿದ್ದಾನೆ.

• ಯಾರೊಡನೆಯೂ ಸೇರುವುದಿಲ್ಲ, ಮಾತನಾಡುವುದಿಲ್ಲ. ಕ್ಯಾಂಟೀನು, ಹೋಟೇಲು ಎಲ್ಲಿಗೂ ಯಾರೊಡನೆಯೂ ಹೋಗುವುದಿಲ್ಲ.

• ಮನೆಯಲ್ಲಿ ಸಹಾ ಇದೇ ರೀತಿ. ತನ್ನ ಕೋಣೆಯೊಳಗೆ ಸೇರಿದರೆ ಆಯಿತು, ಈಚೆಗೆ ಬರುವುದೇ ತುಂಬ ಕಡಿಮೆ.

• ತಂಗಿಯ ಮೇಲೆ ವಿಪರೀತ ಸಿಟ್ಟು

• ಒಮ್ಮೊಮ್ಮೆ ಅವನ ಕೈ, ಬಾಯಿ, ತುಟಿಗಳು ತುಂಬ ಬಿರುಸಾಗಿ ಅಲುಗಾಡುತ್ತದೆ.

• ಮೊನ್ನೆ ತಂಗಿಯ ಮೇಲೆ ಸ್ಕ್ರೂ ಡ್ರೈವರ್‌ನಿಂದ ಚುಚ್ಚಿ, ಹಲ್ಲೆ ಮಾಡಿದ್ದಾನೆ

• ಮನೆಯಲ್ಲಿ ಆಗಾಗ ಜಗಳ ಮಾಡುತ್ತಾನೆ. ಬಟ್ಟೆ ಬರೆ ಸೂಟ್‌ಕೇಸಿನಲ್ಲಿ ತುಂಬಿಕೊಂಡು ಮನೆಯಿಂದ ಹೊರಗೆ ಹೋಗಿಬಿಡುತ್ತಾನೆ. ಬೇಗ ವಾಪಸ್ ಬಂದುಬಿಡುತ್ತಾನೆ.

• ಕಳೆದ ವಾರ ಇದೇ ರೀತಿ ಹೋದವನು ತನ್ನ ಸ್ನೇಹಿತನ ಮನೆಯಲ್ಲಿ ಒಂದೆರಡು ದಿನ ಉಳಿದುಕೊಂಡ. ಇವನನ್ನು ಇವನ ಮನೆಗೆ ವಾಪಸ್ ತಲುಪಿಸುವುದು ಅವರಿಗೆ ತುಂಬ ಕಷ್ಟವಾಯಿತು.

• ಕತ್ತಲೆ ಕೋಣೆಯೊಳಗೆ ಬಹಳ ಸಮಯ ಇರಲು ಇಷ್ಟಪಡುತ್ತಾನೆ.

• ತನ್ನನ್ನು ಯಾರೋ ಗಮನಿಸುತ್ತಿರುವುದು, ಹತ್ಯೆಮಾಡಲು ಸಂಚು ಹೂಡುತ್ತಿರುವುದು ಎಂದು ಭಯ ಪಡುತ್ತಿದ್ದಾನೆ.

ಮನೆಯಲ್ಲಿ ಇವನ ಕಾಟ ತುಂಬ ಆಗಿ ವಯಸ್ಸಾದ ತಾಯಿ ತಂದೆಯರಿಗೆ ದಿಕ್ಕು ತೋಚದೆ ಆಸ್ಪತ್ರೆಗೆ ಕರೆತಂದಿದ್ದಾರೆ. ಆಸ್ಪತ್ರೆಗೆ ಕರೆತರಲೂ ಹರಸಾಹಸ ಮಾಡಬೇಕಾಯಿತು. "ನನಗೇನಾಗಿದೆ, ನಾನೇಕೆ ಆಸ್ಪತ್ರೆಗೆ ಬರಬೇಕು?" ಎಂದ ರಂಪ ಮಾಡಿದ್ದಾನೆ.

**ಆಸ್ಪತ್ರೆಗೆ ಬಂದಮೇಲೆ**

ತುರ್ತಾಗಿ ಆಸ್ಪತ್ರೆಗೆ ಕರೆತಂದಾಗ ಮನೋವೈದ್ಯರು ಸುರೇಶಚಂದ್ರ ಸ್ಕಿಜೋಫ್ರೀನಿಯಾ (ಇಚ್ಚಿತ್ತ ವಿಕಲತೆ) ಕಾಯಿಲೆಯಿಂದ ಬಳಲುತ್ತಿದ್ದಾನೆ ಎಂದು ರೋಗಪತ್ತೆ ಮಾಡಿದ್ದಾರೆ. ಸಮಸ್ಯೆ ಗಂಭೀರವಾದ ಕಾರಣ ಕೂಡಲೇ ಅಡ್ಮಿಟ್ ಮಾಡಿ ಚಿಕಿತ್ಸೆ ಪ್ರಾರಂಭಿಸಿದ್ದಾರೆ. ಸೂಕ್ತ ಔಷಧೋಪಚಾರ ನಡೆಯುತ್ತಿದ್ದು, ಮನೋವೈದ್ಯರು ಔಷಧಿಯ ಜೊತೆ ಜೊತೆಗೇ ಕೌನ್ಸೆಲಿಂಗ್‌ನ ಅಗತ್ಯತೆಯನ್ನು ಅವರಿಗೆ ತಿಳಿಸಿದ್ದಾರೆ.

ಒಂದು ವಾರದ ಔಷಧೋಪಚಾರದ ನಂತರ ಸುರೇಶಚಂದ್ರ ಕೌನ್ಸೆಲಿಂಗ್‌ಗೆ ಬರುತ್ತಾನೆ.

• ಮೊದಲ ಸೆಷನ್‌ನಲ್ಲಿ ಸಮಾಲೋಚನೆ ನಡೆಸಲಾಯಿತು. ಬಹಳ ಸಮಯ ನನ್ನ ಮುಂದೆ ಕುಳಿತನಾದರೂ ಆತ ಮಾತನಾಡಿದುದು ತುಂಬಾ ಕಡಿಮೆ.

• ಈತನ ವರ್ತನೆಗಳ ಬಗ್ಗೆ ಈಗಾಗಲೇ ಸಂಪೂರ್ಣ ವಿವರಗಳನ್ನು ಸಂಗ್ರಹಿಸಲಾಗಿದೆ.

• ಆದರೆ ಈತ ತನಗೇನೂ ಅಷ್ಟೊಂದು ತೊಂದರೆ ಆಗಿಲ್ಲ, ಸ್ವಲ್ಪ ನೆನಪಿನ ಶಕ್ತಿ ಕಡಿಮೆ ಆಗಿದೆ ಎನ್ನುತ್ತಾನೆ

• ತನ್ನ ತಂಗಿಯ ಮೇಲೆ ಹಲ್ಲೆ ಮಾಡಿದುದು, ಮನೆ ಬಿಟ್ಟು

ಹೋಗುತ್ತಿದ್ದದ್ದು ತನಗೆ ಗೊತ್ತಿಲ್ಲ ಎನ್ನುತ್ತಾನೆ.

• ನಾಳೆಯಿಂದಲೇ ಕೆಲಸಕ್ಕೆ ಹೋಗುತ್ತೇನೆ. ಡಿಸ್ಚಾರ್ಜ್ ಮಾಡಿದರೆ ಎನ್ನುತ್ತಾನೆ.

ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಕೌನ್ಸೆಲಿಂಗ್ ತತ್ವಗಳನ್ನು ಅನುಸರಿಸಿ ಆಶ್ರಿತ (ಕ್ಲೈಂಟ್) ನನ್ನು ಮಾತನಾಡಿಸಲಾಯಿತು. ಅನಂತರ ಆತನ ತಾಯಿ ತಂದೆಯರನ್ನೂ, ತಂಗಿಯನ್ನೂ ಒಳಗೊಂಡಂತೆ ಸಮಾಲೋಚನೆ ನಡೆಸಲಾಯಿತು.

• ಇಂಥಾ ಸವಾಲಿನ ಸಂದರ್ಭಗಳಲ್ಲಿ ಕೌನ್ಸೆಲರ್ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳ ಬಗ್ಗೆ ಜಾಗೃತಿ ವಹಿಸಲಾಯಿತು.

